# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 446(546)
2. ಸದಸ್ಯರ ಹೆಸರು : ಶ್ರೀ ಕೇಶವಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 14.08.2025
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಪ್ರಶ್ನೆ | ಉತ್ತರ |
| --- | --- |
| ಅ) ಕರ್ನಾಟಕ ರಾಜ್ಯ ಹಣಕಾಸು ನಿಗಮದ (ಕೆ.ಎಸ್.ಎಫ್.ಸಿ.) ಮುಖ್ಯ ಉದ್ದೇಶಗಳು ಏನು; ಸದರಿ ನಿಗಮದಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು; ಸದರಿ ನಿಗಮದಲ್ಲಿ ಕೆಲಸ ಮಾಡುವವರು ಯಾವ ಪ್ರಕ್ರಿಯೆಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದಾರೆ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು; | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು (ಕೆ.ಎಸ್.ಎಫ್.ಸಿ.) ಸರ್ಕಾರಿ ಸ್ವಾಮ್ಯದ ಒಂದು ಸಾರ್ವಜನಿಕ ಸಂಸ್ಥೆಯಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ದೀರ್ಘಾವಧಿ ಹಣಕಾಸಿನ ಅಗತ್ಯಗಳನ್ನು ಪೂರೈಸುತ್ತಿರುವ ಒಂದು ಪ್ರಮುಖ ಸಂಸ್ಥೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ದಿ:31.07.2025 ರಂತೆ ಒಟ್ಟು 321 ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದಾರೆ (ಅನುಬಂಧ-1).<br><br>ಸಂಸ್ಥೆಯ ಉದ್ಯೋಗಿಗಳನ್ನು ನೇರ ನೇಮಕಾತಿ, ಬ್ಯಾಕ್ ಲಾಗ್ ಮತ್ತು ಅನುಕಂಪ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ ಹಾಗೂ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ ಕೆಲವು ನೌಕರರನ್ನು ಸೇವಕರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗಿರುತ್ತದೆ. |
| ಆ) ಈಗ ಅವರಿಗೆ ಪಿಎಫ್ ಮತ್ತು ಗ್ರಾಜುಟಿ ಸಿಗುತ್ತಿದೆಯೇ; ನಿವೃತ್ತಿ ಆದ ಮೇಲೆ ಅವರಿಗೆ ಸಿಗುವ ಅನುಕೂಲತೆಗಳೇನು; ಸದರಿ ನಿಗಮದಲ್ಲಿ ಎಷ್ಟು ಜನರ ಮೇಲೆ ಈಗ ಲೋಕಾಯುಕ್ತ ಸೇರಿ ವಿವಿಧ ಸಂಸ್ಥೆಗಳಿಂದ ಕೇಸುಗಳಿವೆ; ನಡೆಯುತ್ತಿವೆ; ಯಾವ ಯಾವ ಅಕ್ರಮದಲ್ಲಿ ಇವರು ಪಾಲ್ಗೊಂಡಿದ್ದಾರೆ; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ನಿಯಮಾವಳಿಯಂತೆ ಉದ್ಯೋಗಿಗಳಿಗೆ ನಿವೃತ್ತಿಯ ಸವಲತ್ತುಗಳಾದ ರಜೆ ನಗದೀಕರಣ, ಭವಿಷ್ಯ ನಿಧಿ ಮತ್ತು ಗ್ರಾಚುಟಿ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br><br>ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ವಿವಿಧ ಸಂಸ್ಥೆಗಳಿಂದ 14 ಜನರ ಮೇಲೆ ಕೇಸುಗಳಿವೆ. ( ಇಲಾಖಾ ವಿಚಾರಣೆ ಸೇರಿದಂತೆ) ವಿವರಗಳನ್ನು **"ಅನುಬಂಧ-2"** ರಲ್ಲಿ ನೀಡಲಾಗಿದೆ. |
| ಇ) ಕೆ.ಎಸ್.ಎಫ್.ಸಿ ಇಲ್ಲಿಯವರಿಗೂ ಎಷ್ಟು ಸಾಲವನ್ನು ಕೊಟ್ಟಿದೆ; ಬಡ್ಡಿ ದರ ಎಷ್ಟು; ಗರಿಷ್ಠ ಮತ್ತು ಕನಿಷ್ಠ ಒಬ್ಬ ವ್ಯಕ್ತಿಗೆ ನಿಗಮದಿಂದ ಸಾಲವನ್ನು ಕೊಡಬೇಕಾದರೆ ಗರಿಷ್ಠ ಮೊತ್ತ ಮತ್ತು ಕನಿಷ್ಠ ಮೊತ್ತ ನಿಗಧಿಯಾಗಿದೆಯೇ; ಇದ್ದರೆ ಅದು ಎಷ್ಟು ಮತ್ತು ಮಾನದಂಡಗಳೇನು; (ಸಂಪೂರ್ಣ ಮಾಹಿತಿ ಒದಗಿಸುವುದು) | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಸ್ಥಾಪನೆಯಾದಾಗಿನಿಂದ 31.03.2025 ರವರೆಗೆ ಒಟ್ಟು 21,409.51 ಕೋಟಿ ರೂ.ಗಳ ನೆರವನ್ನು ನೀಡಿರುತ್ತದೆ.<br><br>ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಪ್ರಸ್ತುತ ಬಡ್ಡಿ ದರ ಶೇ.12 ರಿಂದ ಶೇ.14.50 ರಷ್ಟಿದೆ.<br><br>ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಕನಿಷ್ಠ ಮೊತ್ತ ರೂ.5.00 ಲಕ್ಷಗಳಿಂದ ಗರಿಷ್ಠ ರೂ.2000.00 ಲಕ್ಷಗಳವರೆಗೆ ಸಾಲ ನೀಡುತ್ತದೆ. ಸಂಸ್ಥೆಯು ಏಕ ಸ್ವಾಮ್ಯ/ಪಾಲುದಾರಿಕೆ/ಟ್ರಸ್ಟ್‌ಗಳಿಗೆ ಗರಿಷ್ಠ ರೂ. 800.00 ಲಕ್ಷಗಳನ್ನು ಹಾಗೂ ಕಾರ್ಪೋರೇಟ್ ಸಂಸ್ಥೆಗಳು ಹಾಗೂ ನೋಂದಾಯಿತ ಸಹಕಾರ ಸೊಸೈಟಿಗಳಿಗೆ ರೂ.2000.00 ಲಕ್ಷಗಳವರೆಗೆ ಸಾಲವನ್ನು ನೀಡುತ್ತದೆ. |
| ಈ) ಮುಟ್ಟುಗೋಲು ಹಾಕಿಕೊಂಡಿರುವ ಆಸ್ತಿಯನ್ನು ಹಾಗೆ ದಾಖಲೆಗಳಲ್ಲಿ (book of records) ತರಲಾಗುವುದೆ; ಹಾಲಿ ಇರುವ ಕೇಸುಗಳ ಸಂಖ್ಯೆ ಎಷ್ಟು; ವಿಲೇವಾರಿ ಆಗದೆ ಆಸ್ತಿ ಮತ್ತು ಸಾಲದ ಮೊತ್ತದಲ್ಲಿ ಆಗಿರುವ ಸಮಸ್ಯೆಗಳು ಹಾಗೂ ಕೋರ್ಟ್‌ನಲ್ಲಿ ಇರುವ ಕೇಸ್‌ಗಳೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಮುಟ್ಟುಗೋಲು ಹಾಕಿಕೊಂಡಿರುವ ಆಸ್ತಿಗಳನ್ನು ದಾಖಲಾತಿಗಳಲ್ಲಿ ಯಾವುದೇ ರೀತಿಯ ನಮೂದು ಮಾಡುವುದಿಲ್ಲ. ಮಾರಾಟ ಮಾಡಿದ ನಂತರ ಖರೀದಿದಾರರಿಗೆ ಕ್ರಯ ಪತ್ರವನ್ನು/ ಸೇಲ್ ಸರ್ಟಿಫಿಕೇಟ್ ಅನ್ನು ನೀಡಲಾಗುವುದು.<br>ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಇಲ್ಲಿಯವರೆಗೆ 186 ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುತ್ತದೆ, ಸಂಸ್ಥೆಯು ಮುಟ್ಟುಗೋಲು ಹಾಕಿಕೊಂಡಿರುವುದನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಒಟ್ಟು 40 ಪ್ರಕರಣಗಳು ಹೂಡಿವೆ. ಇಲ್ಲಿಯವರೆಗೆ ನ್ಯಾಯಾಲಯಗಳಲ್ಲಿ ಹೂಡಿರುವ ಪ್ರಕರಣಗಳಿಂದ ಸಂಸ್ಥೆಯ ವಿರುದ್ಧ ಯಾವುದೇ ರೀತಿಯ ಪ್ರತಿಕೂಲ ಆದೇಶ ಆಗಿರುವುದಿಲ್ಲ. |

**ಸಂಖ್ಯೆ: ಆಇ 358 ಆನಿ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

## ಅನುಬಂಧ-1

| ಜಿಲ್ಲಾವಾರು / ವಿಭಾಗವಾರು ಮಾನವ ಸಂಪನ್ಮೂಲ 01.08.2025 ರಂತೆ | | | | | |
|---|---|---|---|---|---|
| ಕ್ರ.ಸಂ. | ಶಾಖಾ ಕಛೇರಿಗಳು | ಭರ್ತಿ | ಕ್ರ.ಸಂ. | ಪ್ರಧಾನ ಕಛೇರಿ | ಭರ್ತಿ |
| 1 | ಬೆಂಗಳೂರು ಗ್ರಾಮಾಂತರ | 15 | 1 | ವ್ಯವಸ್ಥಾಪಕ ನಿರ್ದೇಶಕರವರ ಕಛೇರಿ | 5 |
| 2 | ಕೇಂದ್ರೀಯ | 6 | 2 | ಕಾರ್ಯನಿರ್ವಾಹಕ ನಿರ್ದೇಶಕರು-1 ರವರ ಕಛೇರಿ | 0 |
| 3 | ಚಿಕ್ಕಬಳ್ಳಾಪುರ | 7 | 3 | ಕಾರ್ಯನಿರ್ವಾಹಕ ನಿರ್ದೇಶಕರು-2 ರವರ ಕಛೇರಿ | 0 |
| 4 | ಕೋಲಾರ | 4 | 4 | ಪ್ರಧಾನ ವ್ಯವಸ್ಥಾಪಕರು (ವೃತ್ತ-1) | 3 |
| 5 | ರಾಮನಗರ | 8 | 5 | ಪ್ರಧಾನ ವ್ಯವಸ್ಥಾಪಕರು (ವೃತ್ತ-2) | 3 |
| 6 | ತುಮಕೂರು | 10 | 6 | ಪ್ರಧಾನ ವ್ಯವಸ್ಥಾಪಕರು (ವೃತ್ತ-3) | 2 |
| 7 | ಆಲೆಪ ಕೋಶ ಬೆಂಗಳೂರು | 3 | 7 | ಪ್ರಧಾನ ವ್ಯವಸ್ಥಾಪಕರು (ವೃತ್ತ-4) | 3 |
| 1 | ಚಾಮರಾಜನಗರ | 4 | 8 | ಪ್ರಧಾನ ವ್ಯವಸ್ಥಾಪಕರು (ಆಲೆಪ) | 2 |
| 2 | ಚಿಕ್ಕಮಗಳೂರು | 5 | 9 | ಪ್ರಧಾನ ವ್ಯವಸ್ಥಾಪಕರು (ಸಿ&ಆ) | 2 |
| 3 | ಹಾಸನ | 5 | 10 | ಸಿಬ್ಬಂದಿ & ಆಡಳಿತ ವಿಭಾಗ | 28 |
| 4 | ಮಡಿಕೇರಿ | 4 | 11 | ನಿಯಂತ್ರಣ ವಿಭಾಗ | 11 |
| 5 | ಮಂಡ್ಯ | 8 | 12 | ವಸೂಲಾತಿ ವಿಭಾಗ | 7 |
| 6 | ಮಂಗಳೂರು | 10 | 13 | ಕಾನೂನು ವಿಭಾಗ | 3 |
| 7 | ಮೈಸೂರು | 8 | 14 | ರಿಸ್ಕ್ & ಎನ್‌ಪಿಎ ಮ್ಯಾನೇಜೆಂಟ್ ವಿಭಾಗ | 3 |
| 8 | ಉಡುಪಿ | 5 | 15 | ಮಾಹಿತಿ ತಂತ್ರಜ್ಞಾನ ವಿಭಾಗ | 7 |
| 9 | ಆಲೆಪ ಕೋಶ ಮೈಸೂರು | 4 | 16 | ಬಿಡಿ & ಸಿಆರ್ ವಿಭಾಗ | 3 |
| 1 | ಬಾಗಲಕೋಟೆ | 5 | 17 | ಆಂತರಿಕ ಲೆಕ್ಕಪರಿಶೋಧನೆ ವಿಭಾಗ | 3 |
| 2 | ಬೆಳಗಾವಿ | 8 | 18 | ಕಾರ್ಯದರ್ಶಿ ವಿಭಾಗ | 1 |
| 3 | ಚಿತ್ರದುರ್ಗ | 5 | 19 | ಆಡಳಿತ ಮಾಹಿತಿ ವ್ಯವಸ್ಥೆ ವಿಭಾಗ | 2 |
| 4 | ಧಾರವಾಡ | 12 | 20 | ನಿಯೋಜನೆ / ಅನ್ಯಕಾರ್ಯ | 28 |
| 5 | ಗದಗ | 6 | | **ಪ್ರಧಾನ ಕಛೇರಿ ಒಟ್ಟು ಭರ್ತಿ** | 116 |
| 6 | ಹಾವೇರಿ | 4 | | | |
| 7 | ಕಾರವಾರ | 3 | | **ಸಂಸ್ಥೆಯ ಒಟ್ಟು ಭರ್ತಿ** | 321 |
| 8 | ಶಿವಮೊಗ್ಗ | 5 | | | |
| 9 | ಆಲೆಪ ಕೋಶ ಧಾರವಾಡ | 7 | | | |
| 1 | ಬಳ್ಳಾರಿ | 6 | | | |
| 2 | ಬೀದರ್ | 5 | | | |
| 3 | ದಾವಣಗೆರೆ | 2 | | | |
| 4 | ಕಲಬುರ್ಗಿ | 9 | | | |
| 5 | ಕೊಪ್ಪಳ | 7 | | | |
| 6 | ರಾಯಚೂರು | 5 | | | |
| 7 | ವಿಜಯಪುರ | 3 | | | |
| 8 | ಯಾದಗಿರಿ | 4 | | | |
| 9 | ಆಲೆಪ ಕೋಶ ಕಲಬುರ್ಗಿ | 3 | | | |
| **ಶಾಖಾ ಕಛೇರಿಗಳ ಒಟ್ಟು ಭರ್ತಿ** | | 205 | | | |

# ಅನುಬಂಧ-2

## ಕರ್ನಾಟಕ ರಾಜ್ಯ ಹಣಕಾಸು ನಿಗಮದ ಅಧಿಕಾರಿಗಳ ಮೇಲಿನ ಶಿಸ್ತು ಪ್ರಕರಣಗಳ ವಿವರ

| ಕ್ರ. ಸಂ | ಹೆಸರು ಮತ್ತು ಹುದ್ದೆ | ಎರವಲು ಸೇವೆಯ ಸ್ಥಳ ಮತ್ತು ಸಂಕ್ಷಿಪ್ತ ಲೋಪದೋಷಗಳು | ಚಾರ್ಜ್ ಶೀಟ್ ನೀಡಿರುವ ಬಗ್ಗೆ | ದಂಡ/ಇತ್ತೀಚಿನ ಮಾಹಿತಿ |
|---|---|---|---|---|
| 01 | ವಸಂತಕುಮಾರ್ ಡಿ. ಅವರಾದಿ, ಸಹಾಯಕ ವ್ಯವಸ್ಥಾಪಕರು | ಸಮಾಜ ಕಲ್ಯಾಣ ಇಲಾಖೆಯ ತನ್ನ ಪತ್ರ ದಿ.21.12.2010 ರಲ್ಲಿ ಸಮಾಜ ಕಲ್ಯಾಣ ಅಧಿಕಾರಿಯಾಗಿ, ಗುಲ್ಬರ್ಗಾದಲ್ಲಿ ನಿಯೋಜನೆ ಮೇಲೆ ಕರ್ತವ್ಯ 2007-08ನೇ ಸಾಲಿನಲ್ಲಿ ನಿರ್ವಹಿಸುತ್ತಿದ್ದಾಗ ಅನುಮತಿ ಪಡೆಯದ ಶಾಲೆಗಳ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ವಿತರಿಸಿದ್ದಾರೆ ಎಂದು ಆರೋಪಿಸಲಾಗಿದೆ.<br>ಅ) ರೂ.10,07,600/- ಹಣವನ್ನು ಗುಲ್ಬರ್ಗ ಖಜಾನೆಯಿಂದ 28 ಶಾಲೆಗಳಿಗೆ ಪ್ರಿ-ಮೆಟ್ರಿಕ್ ವಿದ್ಯಾರ್ಥಿವೇತನ ವಿತರಣೆಗಾಗಿ ಸೆಳೆದಿರುತ್ತಾರೆ. 28 ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಹಣ ವಿತರಣೆ ಮಾಡಿರುವ ಚೆಕ್‌ಗಳ ಯಾವುದೇ ಸ್ವೀಕೃತಿಗಳು ಲಭ್ಯವಿಲ್ಲ. ಅಂತಹ ಶಾಲೆಗಳು ಅಸ್ತಿತ್ವದಲ್ಲಿಲ್ಲ ಎಂದು ಬಿಇಒ ವರದಿ ಮಾಡಿರುವುದರಿಂದ ಅವರು ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ.<br>ಬಿ) ರೂ.56,75,145/- ಗಳ 14 ಚೆಕ್‌ಗಳನ್ನು ಗುಲ್ಬರ್ಗದ ಖಜಾನೆಯಿಂದ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಹೆಸರಿನಲ್ಲಿ ಪಡೆಯಲಾಗಿದೆ. ಗುಲ್ಬರ್ಗದ ಉಪನಿರ್ದೇಶಕರು 4 ಕಾಲೇಜುಗಳು ಮಾನ್ಯತೆ ಪಡೆದಿಲ್ಲ ಎಂದು ವರದಿ ನೀಡಿದ್ದು, ಪೋಸ್ಟ್ ಮೆಟ್ರಿಕ್ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಆನ್‌ಲೈನ್‌ನಲ್ಲಿ ಆಯಾ ಬ್ಯಾಂಕ್ | ಸಿ.ಎಸ್.17/ 20.03.17 | ಸಮಾಜ ಕಲ್ಯಾಣ ಇಲಾಖೆಯು ವಿಚಾರಣೆಯನ್ನು ಪೂರ್ಣಗೊಳಿಸಿದೆ. ಆರೋಪಗಳು ಸಾಬೀತಾಗಿವೆ. 2ನೇ ಕಾರಣ ಕೇಳುವ ನೋಟೀಸನ್ನು ದಿ.17.07.2019 ರಂದು ನೀಡಿದೆ.<br><br>ಸಂಸ್ಥೆಯ ದಿನಾಂಕ 22.02.2024 ಮತ್ತು 23.10.2024 ರ ಪತ್ರಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರಿಗೆ ಈ ಬಗ್ಗೆ ಕೋರಲಾಗಿದ್ದು, ಶಿಸ್ತು ಕ್ರಮದ ಪ್ರಸ್ತುತ ಸ್ಥಿತಿಯನ್ನು ಮತ್ತು ವಿಚಾರಣಾ ವರದಿಯ ಪ್ರಕಾರ ಅಧಿಕಾರಿಯ ಮೇಲೆ ವಿಧಿಸಲಾದ ದಂಡನೆಯ ಬಗ್ಗೆ ಮಾಹಿತಿ ಕೋರಲಾಗಿದೆ. |

| | | | | |
|---|---|---|---|---|
| | | ಖಾತೆಗಳಿಗೆ ವರ್ಗಾಯಿಸಿ, ಪಾವತಿ ಮಾಡಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ವಿಫಲರಾಗಿದ್ದಾರೆ. ಹೀಗಾಗಿ ಅಧಿಕಾರಿಯು ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ.<br>ಸಿ) ರೂ.1,63,92,471/- ಹಣವನ್ನು ಗುಲ್ಬರ್ಗಾದ ಖಜಾನೆಯಿಂದ ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿವೇತನ ಪಾವತಿಗಾಗಿ 62 ಕಾಲೇಜುಗಳ ಹೆಸರಿನಲ್ಲಿ 62 ಚೆಕ್‌ಗಳನ್ನು ಪಡೆದಿದ್ದು, ಅವುಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ.<br>ಡಿ) ಸರ್ಕಾರಿ ನಿಧಿಗಳನ್ನು ಮಂಜೂರು ಮಾಡಲಾದ ನಿರ್ದಿಷ್ಟ ಉದ್ದೇಶಕ್ಕಾಗಿ ಬಳಸುವಲ್ಲಿ ವಿಫಲರಾಗಿರುತ್ತಾರೆ.<br>ಇ) ಶ್ರೀ ಅಣ್ಣಾರಾವ್ ಇವರು ಅಂಬೇಡ್ಕರ್ ಕಾಲೇಜು ಬಾಲಕರ ವಿದ್ಯಾರ್ಥಿನಿಲಯ, ಗುಲ್ಬರ್ಗಾ ಮತ್ತು ಬಾಬು ಜಗಜೀವನ ರಾಂ ವಸತಿ ನಿಲಯಗಳನ್ನು ನಿರ್ವಹಿಸುತ್ತಿದ್ದು, ಅವರು ಜಿಲ್ಲಾ ಪಂಚಾಯತ್ ನಿಂದ ಅಮಾನತ್ತುಗೊಂಡ ನಂತರ ಸದರಿ 2 ವಿದ್ಯಾರ್ಥಿನಿಯಲಗಳ ಪ್ರಭಾರವನ್ನು ತಾಲ್ಲೂಕು ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇತರೆ ವಾರ್ಡನ್‌ಗೆ ಹೆಚ್ಚುವರಿ ಪ್ರಭಾರದಲ್ಲಿಡುವ ವ್ಯವಸ್ಥೆ ಮಾಡದೇ ಸದರಿ ಅಧಿಕಾರಿಯವರೇ 2 ವಿದ್ಯಾರ್ಥಿನಿಲಯಗಳ ನಿರ್ವಹಣೆಯನ್ನು ವಹಿಸಿಕೊಂಡು ರೂ.3,33,125/- ಗಳನ್ನು ಡ್ರಾ ಮಾಡಿದ್ದು, ಇದರಲ್ಲಿ ಹೆಚ್ಚುವರಿಯಾಗಿ ರೂ.1,20,500/- ಗಳನ್ನು ನಿಯಮಬಾಹೀರವಾಗಿ ನಿಲಯಗಳ ಉಳಿತಾಯ ಖಾತೆಯಿಂದ ಪಡೆದು, ದುರುಪಯೋಗ ಪಡಿಸಿಕೊಂಡಿರುತ್ತಾರೆ. | | |

| | | | | |
|---|---|---|---|---|
| | | ಎಫ್) ವಸತಿ ನಿಲಯಗಳ ನಿರ್ವಹಣೆಗೆ ಮೀಸಲಿಟ್ಟ ರೂ.11,02,550/-ರ ಬದಲಾಗಿ ಮಹಿಳಾ ಸಬಲೀಕರಣ ಕಾರ್ಯಕ್ರಮದ ಹಣ ರೂ.15,78,772/- ಹಾಗೂ ಉಳಿತಾಯ ಖಾತೆಯ ರೂ.15,69,850/- ಒಟ್ಟು ರೂ.31,48,422/- ಗಳ ಖರ್ಚು ಭರಿಸಿ ಇದನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಅನುಮತಿ ಇಲ್ಲದೆ ಒಂದು ಕಾರ್ಯಕ್ರಮದಡಿ ಇದ್ದ ಹಣವನ್ನು ಇನ್ನೊಂದು ಕಾರ್ಯಕ್ರಮಕ್ಕೆ ವೆಚ್ಚ ಭರಿಸಿ, ಸರ್ಕಾರದ ಅನುದಾನದ ಮಾರ್ಗ ಪಲ್ಲಟ ಮಾಡಿರುತ್ತಾರೆ ಮತ್ತು ತಮ್ಮ ಹುದ್ದೆಯನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ.<br><br>ಜಿ) ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನಕ್ಕಾಗಿ ಇರುವ ಹಣವನ್ನು ಸಾದಿಲ್ವಾರು ವೆಚ್ಚಗಳಿಗಾಗಿ ವೆಚ್ಚ ಭರಿಸಲು ಅವಕಾಶವಿಲ್ಲದಿದ್ದರೂ ಸಹ ಮೇಲಾಧಿಕಾರಿಗಳ ಅನುಮತಿ ಪಡೆಯದೇ ವಿದ್ಯಾರ್ಥಿ ವೇತನದ ಅರ್ಜಿಗಳ ಮುದ್ರಣಕ್ಕಾಗಿ ಖರ್ಚು ಮಾಡಿರುತ್ತಾರೆ. ಇದರಿಂದಾಗಿ ಅವರು ಇತರ ಯೋಜನೆಗಳಿಗೆ ಮೀಸಲಾದ ಸರ್ಕಾರಿ ಹಣವನ್ನು ಬೇರೆಡೆಗೆ ಮಾರ್ಗ ಪಲ್ಲಟ ಮಾಡಿರುತ್ತಾರೆ ಎಂಬ ಆರೋಪವಿರುತ್ತದೆ. | | |

| | | | | |
|---|---|---|---|---|
| 02 | **ಬಸವರಾಜೇಗೌಡ ಕೆ. (ಮಾಜಿ ವ್ಯವಸ್ಥಾಪಕರು (ತಾ)-ಪಿಪಿ ಅಧಿಕಾರಿಯು 30.11.2020 ರಂದು ವಯೋನಿವೃತ್ತಿ ಹೊಂದಿರುತ್ತಾರೆ** | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೆಂಗೇರಿ ವಾರ್ಡ್‌ನಲ್ಲಿ ನಿಯೋಜನೆ ಮೇರೆಗೆ ಕೆಲಸ ಮಾಡುತ್ತಿದ್ದಾಗ ಕುಡಿಯುವ ನೀರು ಸರಬರಾಜು ಮತ್ತು ತುರ್ತು ಕೆಲಸಗಳಿಗಾಗಿ ಬೋರ್‌ವೆಲ್‌ಗಳನ್ನು ಕೊರೆಯಲು ಸಂಬಂಧದಲ್ಲಿ. ರೂ.2,59,09,451/- ಮೌಲ್ಯದ ಬಿಲ್‌ಗಳನ್ನು ಹಣ ಬಿಡುಗಡೆಗಾಗಿ ಸಲ್ಲಿಸಲಾಗಿತು. ಅವರು ಮಾನದಂಡಗಳಿಗೆ ವಿರುದ್ಧವಾಗಿ ಅಂದಾಜುಗಳನ್ನು ಹಾಗೂ ವಾಸ್ತವಿಕವಲ್ಲದ ಅಂದಾಜುಗಳನ್ನು ಮಾಡಿದ್ದು ಸದರಿ ಅಂದಾಜುಗಳಿಗೆ ಅನುಮೋದನೆಯನ್ನು ಪಡೆದಿರುವುದಿಲ್ಲ, ಒಪ್ಪಂದದ ನಿಯಮಗಳನ್ನು ಪಾಲಿಸದೇ, ಒಬ್ಬ ಗುತ್ತಿಗೆದಾರನಿಗೆ 10 ರಿಂದ 30 ಕೆಲಸಗಳನ್ನು ನೀಡಲಾಗಿದೆ, ಮಾಡದ ಕೆಲಸಗಳ ವಿವರಗಳನ್ನು "ತುರ್ತು" ಎಂಬ ಹೇಳಿಕೆಗಳೊಂದಿಗೆ ಪೂರ್ವಾನುಮೋದನೆ ಇಲ್ಲದೆ ಕಾರ್ಯಗತಗೊಳಿಸಿರುತ್ತಾರೆ ಎಂಬ ಆರೋಪವಿದೆ. | | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಶಿಫಾರಸುಗಳ ಆಧಾರದ ಮೇಲೆ, ಸದರಿ ಅಧಿಕಾರಿಯನ್ನು ದಿನಾಂಕ 27.01.2011 ರ ಆದೇಶದನ್ವಯ ಅಮಾನತುಗೊಳಿಸಲಾಗಿತ್ತು<br>ವಿಚಾರಣೆ ಬಾಕಿ ಇರಿಸಿ 06.09.2011 ರಂದು ಅವರ ಸೇವೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿಯೇ ಮರುಸ್ಥಾಪಿಸಲಾಗಿರುತ್ತದೆ.<br>ಸಂಸ್ಥೆಯ ದಿ.29.05.2019 ಮತ್ತು 15.07.2019 ರ ಪತ್ರಗಳಲ್ಲಿ ಪ್ರಕರಣದ ಪ್ರಸ್ತುತ ಸ್ಥಿತಿಯನ್ನು ಒದಗಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಕೋರಲಾಗಿದೆ. ಉತ್ತರಕ್ಕಾಗಿ ಕಾಯಲಾಗುತ್ತಿದೆ. |
| 03 | **ಬಸವರಾಜೇಗೌಡ ಕೆ. (ಮಾಜಿ ವ್ಯವಸ್ಥಾಪಕರು (ತಾ)-ಪಿಪಿ ಅಧಿಕಾರಿಯು 30.11.2020 ರಂದು ವಯೋನಿವೃತ್ತಿ ಹೊಂದಿರುತ್ತಾರೆ)** | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೆಂಗೇರಿ ವಾರ್ಡ್‌ನಲ್ಲಿ ನಿಯೋಜನೆ ಮೇರೆಗೆ ಕೆಲಸ ಮಾಡುವ ಸಮಯದಲ್ಲಿ ಕೆಂಗೇರಿ ಉಪವಿಭಾಗದಲ್ಲಿರುವ ಭಾಗೀರಥ ಲೇಔಟ್ [159/130] ರಸ್ತೆಗಳ ಸುಧಾರಣೆ ಮತ್ತು ಡಾಂಬರೀಕರಣಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುವಾಗ ಬಿಬಿಎಂಪಿಗೆ ಆರ್ಥಿಕ ನಷ್ಟವನ್ನುಂಟು ಮಾಡಿ ವಿವಿಧ ಅಕ್ರಮಗಳನ್ನು ಎಸಗಿದ್ದಾರೆ ಎಂಬ ಆರೋಪವಿರುತ್ತದೆ. | | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದಿ.10.10.2011 ರ ಪತ್ರದಲ್ಲಿ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಕರಡು ಚಾರ್ಜ್‌ಶೀಟ್ ಅನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಕಳುಹಿಸಿದೆ.<br>ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ದಿ.15.02.2013 ರಂದು ಪತ್ರದಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಸಿಬ್ಬಂದಿ ನಿಯಮಾವಳಿಗಳ ಪ್ರಕಾರ ನಿಯೋಜನೆ ಸೇವೆ ಪಡೆದ ಸಂಸ್ಥೆಯೇ |

| | | | | |
|---|---|---|---|---|
| | | | | ಶಿಸ್ತುಕ್ರಮ ಜರುಗಿಸಬೇಕು ಎಂದು ಹೇಳಿ ಸದರಿ ಆರೋಪ ಪಟ್ಟಿಯನ್ನು ಹಿಂತಿರುಗಿಸಲಾಗಿತ್ತು.<br>ಸದರಿ ವಿಷಯದ ಬಗ್ಗೆ ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಇವರಿಗೆ ದಿ.30.03.2013 ರಂದು ಪತ್ರ ಬರೆಯಲಾಗಿದೆ ಮತ್ತು ಪ್ರಕರಣದ ಪ್ರಸ್ತುತ ಸ್ಥಿತಿಗತಿಯನ್ನು ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ದಿ.29.05.2019 ರಂದು ನೆನಪೋಲೆ ಪತ್ರವನ್ನು ಕಳುಹಿಸಲಾಗಿದೆ. ಮಾಹಿತಿ ನಿರೀಕ್ಷಿಸಲಾಗುತ್ತಿದೆ. |
| **04** | **ಬಸವರಾಜೇಗೌಡ ಕೆ. (ಮಾಜಿ ವ್ಯವಸ್ಥಾಪಕರು (ತಾ)-ಪಿಪಿ ಅಧಿಕಾರಿಯು 30.11.2020 ರಂದು ವಯೋನಿವೃತ್ತಿ ಹೊಂದಿರುತ್ತಾರೆ)** | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೆಂಗೇರಿ ವಾರ್ಡ್‌ನಲ್ಲಿ ನಿಯೋಜನೆ ಮೇರೆಗೆ ಕೆಲಸ ಮಾಡುವ ಸಮಯದಲ್ಲಿ ಕೆಂಗೇರಿ ಉಪವಿಭಾಗದಲ್ಲಿ ವಿವಿಧ ಕಾಮಗಾರಿಗಳಿಗೆ ಟೆಂಡರ್ ಕರೆಯುವಾಗ ವಿವಿಧ ಅಕ್ರಮಗಳನ್ನು ಎಸಗಿರುತ್ತಾರೆ, ಕೆಟಿಪಿಪಿ ಮಾನದಂಡಗಳನ್ನು ಪಾಲಿಸದಿರುವುದಿಲ್ಲ, ಟೆಂಡರ್ ಮೊತ್ತದ ಶೇ. 5 ರಷ್ಟು ಭದ್ರತಾ ಠೇವಣಿ ಸಂಗ್ರಹಿಸದಿರುವುದಿಲ್ಲ, ಕಾರ್ಯಕ್ಷಮತೆ ಖಾತರಿಯನ್ನು ಸಂಗ್ರಹಿಸಿರುವುದಿಲ್ಲ ಬಿಲ್‌ಗಳಿಂದ ಮೊತ್ತಗಳನ್ನು ಕಡಿತಗೊಳಿಸಲು ಮುಂದೂಡಲಾಗಿದೆ ಎಂಬ ಆರೋಪವಿರುತ್ತದೆ. | | ನಗರಾಭಿವೃದ್ಧಿ ಇಲಾಖೆಯು ದಿ.15.02.2018 ರಂದು ಆರೋಪ ಪಟ್ಟಿಯನ್ನು ಜಾರಿಗೊಳಿಸಿ, ದಿ.22.05.2019 ರ ಆದೇಶದ ಪ್ರಕಾರ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ.ಬಿ.ಎಂ.ಅಂಗಡಿ ಅವರನ್ನು ವಿಚಾರಣಾ ಅಧಿಕಾರಿಯನ್ನಾಗಿ ನೇಮಿಸುವ ಮೂಲಕ ಇಲಾಖಾ ವಿಚಾರಣೆಗೆ ಅಧಿಸೂಚನೆ ಹೊರಡಿಸಲಾಗಿದೆ. |
| **05** | **ಸೋಮೇಶ್ ಎಂ. ಚೀಕ್ ಮಠ್ ವ್ಯವಸ್ಥಾಪಕರು (ತಾ)** | ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್‌ಸಿ )ನೇಮಕಾತಿ ಹಗರಣ | | ಪ್ರಕರಣದ ಪ್ರಸ್ತುತ ಸ್ಥಿತಿಗತಿಗಾಗಿ ಸಿಐಡಿ ಡಿಜಿಪಿಗೆ ಪತ್ರ ಕಳುಹಿಸಲಾಗಿದೆ. ಡಿಜಿಪಿ ಯವರು ದಿ.24.12.2021 ರಂದು ಉತ್ತರ ನೀಡಿ, ಇತರ ಆರೋಪಿಗಳ ವಿರುದ್ಧ ಪ್ರಾಸಿಕ್ಯೂಷನ್ ಅನುಮತಿ ಪಡೆದ ನಂತರ, ಮತ್ತೊಮ್ಮೆ ನ್ಯಾಯಾಲಯದ ಮುಂದೆ ಆರೋಪಪಟ್ಟಿ |

| | | | | |
|---|---|---|---|---|
| | | ನಗರಾಭಿವೃದ್ಧಿ ಇಲಾಖೆಯು ಸದರಿ ಅಧಿಕಾರಿಯನ್ನು ದಿ.04.07.2013 ರಂದು ಮಾತೃ ಇಲಾಖೆಗೆ ಹಿಂತಿರುಗಿಸಿತು. ಅವರು ಬಿಡಿಎ ನಲ್ಲಿ ನಿಯೋಜನೆ ಮೇರೆ ಕೆಲಸ ನಿರ್ವಹಿಸುವಾಗ, ಅವರು ಕರ್ನಾಟಕ ಲೋಕಸೇವಾ ಆಯೋಗ ನೇಮಕಾತಿ ಹಗರಣದಲ್ಲಿ ಭಾಗಿಯಾಗಿದ್ದಾರೆ. [ಟಿವಿ9 ನಲ್ಲಿ 23.05.2013 ರಂದು ಪ್ರಸಾರವಾದ ಅವರ ಫೋಟೋದೊಂದಿಗೆ ವಿಷಯ] ಅವರು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರು ಮತ್ತು ಅಭ್ಯರ್ಥಿಗಳ ನಡುವೆ ಮಧ್ಯವರ್ತಿಯಾಗಿ ವರ್ತಿಸಿದ್ದಾರೆ ಎಂದು ಆರೋಪಿಸಲಾಗಿದೆ.<br>ದಿ.22.01.2014 ರಂದು ನಡೆದ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ದಿ.28.01.2014 ರ ಪತ್ರದ ಮೂಲಕ ಅಧಿಕಾರಿಯ ಮೇಲೆ ಮೊಕದ್ದಮೆ ಹೂಡಲು ಸಿಐಡಿಗೆ ಅನುಮತಿ ನೀಡಲಾಗಿದೆ.. ವಿಶೇಷ ಸಿಸಿ ಸಂಖ್ಯೆ 311/14 ರಲ್ಲಿರುವ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಸ್ವೀಕರಿಸಲಾಗಿದೆ. | | ಸಲ್ಲಿಸಲಾಗುವುದು ಎಂದು ತಿಳಿಸಿರುತ್ತಾರೆ. |
| **06** | **ಟಿ. ಕೃಷ್ಣೇಗೌಡ ಕೆ. (ಮಾಜಿ ವ್ಯವಸ್ಥಾಪಕರು (ತಾ) ಅಧಿಕಾರಿಯು 31.05.2021 ರಂದು ವಯೋನಿವೃತ್ತಿ ಹೊಂದಿರುತ್ತಾರೆ)** | ಸರ್ವಶಿಕ್ಷಣ ಅಭಿಯಾನದಲ್ಲಿ ನಿಯೋಜನೆಯಲ್ಲಿದ್ದಾಗ ಆದ ಲೋಪಗಳು. ರಾಜ್ಯ ಸರ್ಕಾರ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿಯವರು ದಿ.20.12.2016 ರಂದು ಪತ್ರವನ್ನು ಕಳುಹಿಸಿದ್ದು, ಅಧಿಕಾರಿಯು ದಿ.02.12.2002 ರಿಂದ ದಿ.09.06.2008, ದಿ.02.08.2010 ರಿಂದ ದಿ.19.05.2011 ಮತ್ತು ದಿ.05.11.2011 ರಿಂದ ದಿ.19.07.2013 ರವರೆಗಿನ ತಮ್ಮ ಅಧಿಕಾರಾವಧಿಯಲ್ಲಿ ಕೆಲವು ಅಕ್ರಮಗಳನ್ನು ಮಾಡಿದ್ದಾರೆ ಎಂದು | **SCN/CS 20.12.16** | ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆಯವರು ದಿ.09.11.2018 ರ ಆದೇಶದಲ್ಲಿ ಇಲಾಖಾ ವಿಚಾರಣೆ ಹಾಗೂ ತನಿಖಾಧಿಕಾರಿಗಳನ್ನು ಹಾಗೂ ಮಂಡನಾಧಿಕಾರಿಗಳನ್ನು ನೇಮಿಸಿ ಆದೇಶವನ್ನು ಹೊರಡಿಸಿರುತ್ತಾರೆ.<br>ಅಧಿಕಾರಿಯು ಹೈಕೋರ್ಟ್‌ನಲ್ಲಿ WP ಸಂಖ್ಯೆ 5823/2019 ಅರ್ಜಿಯನ್ನು ಸಲ್ಲಿಸಿ, ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲು ಮತ್ತು ಸರಕಾರಕ್ಕೆ ತನ್ನ ಉತ್ತರವನ್ನು ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನಗಳನ್ನು |

| | | | | |
|---|---|---|---|---|
| | | ತಿಳಿಸಿದ್ದಾರೆ.<br><br>ಅಧಿಕಾರಿಯು ನಿಗಮದ ಸೇವೆಯಿಂದ 31.05.2021 ರಿಂದ ನಿವೃತ್ತರಾಗಿರುತ್ತಾರೆ. | | ನೀಡುವಂತೆ ಕೋರಿದರು. ಅದರಂತೆ ನ್ಯಾಯಾಲಯವು ದಿ.08.02.2019 ರ ಆದೇಶದಲ್ಲಿ ದಿ: 08.03.2019 ರೊಳಗೆ ಅಥವಾ ಅದಕ್ಕೂ ಮೊದಲು ಕಡತಗಳನ್ನು ಪರಿಶೀಲಿಸಿ ತಮ್ಮ ಉತ್ತರವನ್ನು ಸಲ್ಲಿಸಲು ಅವರಿಗೆ ಅನುಮತಿ ನೀಡಿರುತ್ತದೆ..<br>ಅದರಂತೆ, ಅಧಿಕಾರಿಯು ತಮ್ಮ ಉತ್ತರವನ್ನು ದಿ.28.03.2019 ರಂದು ನೀಡಿದ್ದಾರೆ ಮತ್ತು ದಿ.31.08.2019 ರಂದು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ತಮ್ಮ ಲಿಖಿತ ಉತ್ತರವನ್ನು ಪರಿಗಣಿಸಲು ಮತ್ತು ಅಗತ್ಯವಿದ್ದರೆ, ವಿಚಾರಣಾ ಅಧಿಕಾರಿ ಮತ್ತು ಮಂಡನಾ ಅಧಿಕಾರಿ ಅವರನ್ನು ಹೊಸದಾಗಿ ನೇಮಿಸುವ ಆದೇಶವನ್ನು ಹೊರಡಿಸಲು ಕೋರಿದ್ದಾರೆ |
| **07** | **ಹೆಚ್.ಎಲ್. ಕೃಷ್ಣೇಗೌಡ ವ್ಯವಸ್ಥಾಪಕರು (ಹಣಕಾಸು ಮತ್ತು ಲೆಕ್ಕ) ಅಧಿಕಾರಿಯು 31.01.2020 ರಂದು ವಯೋನಿವೃತ್ತಿ ಹೊಂದಿರುತ್ತಾರೆ)** | ಡಿ. ದೇವರಾಜ್ ಅರುಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಚಿತ್ರದುರ್ಗ ಶಾಖೆಯಲ್ಲಿ ನಿಯೋಜನೆಯಲ್ಲಿದ್ದಾಗ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆಯಲು ಅನುಮತಿ ನೀಡುವಾಗ ನಿಯಮಗಳನ್ನು ಪಾಲಿಸಲು ವಿಫಲರಾಗಿದ್ದಾರೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರು & ಶಿಸ್ತು ಪ್ರಾಧಿಕಾರ ಇವರ ದಿ.13.08.2018 ರ ಆದೇಶದಲ್ಲಿ ಆರೋಪಿಸಲಾಗಿರುತ್ತದೆ.<br><br>ದಿ.31.01.2020 ರಿಂದ ನಿಗಮದ ಸೇವೆಯಿಂದ ನಿವೃತ್ತರಾಗಿದ್ದಾರೆ. | | ವ್ಯವಸ್ಥಾಪಕ ನಿರ್ದೇಶಕರು ಡಿ. ದೇವರಾಜ್ ಅರುಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವರು ಕರ್ನಾಟಕ ನಾಗರಿಕ ಸೇವಾ ನಿಯಮಗಳ ನಿಯಮ 14(ಎ) ಅಡಿಯಲ್ಲಿ ಸದರಿ ಪ್ರಕರಣವನ್ನು ಉಪ-ಲೋಕಾಯುಕ್ತಕ್ಕೆ ವಹಿಸಿರುತ್ತಾರೆ .<br>ಈ ಬಗ್ಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ದಿ.16.11.2018 ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕ ಡಿ.ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದವರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಸೇವಾ ನಿಯಮಗಳ ಪ್ರಕಾರ, ನಿಯೋಜನೆಗೆ ತೆಗೆದುಕೊಂಡ ಸಂಸ್ಥೆಯು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಮೊದಲು ಮಾತ್ರ ಇಲಾಖೆಯ ಅನುಮತಿಯನ್ನು ಪಡೆಯಬೇಕಾಗುತ್ತದೆ ಎಂದು ತಿಳಿಸಲಾಗಿದೆ.<br><br>ಈ ವಿಷಯದಲ್ಲಿ ಸದರಿ ನಿಗಮವು ಇನ್ನೂ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಅನುಮತಿಯನ್ನು ಕೋರಿರುವುದಿಲ್ಲ. |

| | | | | |
|---|---|---|---|---|
| 08 | ವಸಂತಕುಮಾರ್ ಡಿ. ಅವರಾದಿ | ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಜಿಲ್ಲಾ ವ್ಯವಸ್ಥಾಪಕರು, ಯಾದಗಿರಿ ಆಗಿ ನಿಯೋಜನೆ ಮೇಲೆ ಕೆಲಸ ಮಾಡುತ್ತಿದ್ದಾಗ, ನಿಗಮದ ಮಹಿಳಾ ಅಭಿವೃದ್ಧಿ ಯೋಜನೆಯಡಿ ಸಾಲ ಮಂಜೂರು ಮಾಡಲು ಶ್ರೀ.ಲಕ್ಷ್ಮಣ್ ತಂದೆ ಬಸಪ್ಪ ಕಟ್ಟಿಮನಿ ಅವರಿಂದ ರೂ.20,000/- ಲಂಚ ಪಡೆಯುತ್ತಿದ್ದಾಗ ದಿ.29.12.2018 ರಂದು ಯಾದಗಿರಿಯ ಎಸಿಬಿ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದರು.<br>ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಯಾದಗಿರಿಯಿಂದ ಗುಲ್ಬರ್ಗಕ್ಕೆ ಹೊಣೆಗಾರಿಕೆ ಬದಲಾವಣೆಯೊಂದಿಗೆ ಅಧಿಕಾರಿಯನ್ನು ಅಮಾನತುಗೊಳಿಸಿದೆ. ದಿ.08.03.2019 ರಂದು ನೀಡಿರುವ ನಮೂನೆಯಲ್ಲಿ ಸೇವಾ ವಿವರಗಳನ್ನು ಯಾದಗಿರಿಯ ಭ್ರಷ್ಟಾಚಾರ ನಿಗ್ರಹ ದಳ ಕಚೇರಿಗೆ ರವಾನಿಸಲಾಗಿದೆ. | | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಸಕ್ಷಮ ಪ್ರಾಧಿಕಾರವು ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಅಧಿಕಾರಿಯ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಒಪ್ಪಿಗೆ ನೀಡಲಾಗಿದೆ. ಬೆಂಗಳೂರಿನ AGDP- ಭ್ರಷ್ಟಾಚಾರ ನಿಗ್ರಹ ದಳಕ್ಕೆ ಪ್ರಾಸಿಕ್ಯೂಷನ್ ಗೆ ಅನುಮತಿಯನ್ನು ಸಹ ನೀಡಲಾಗಿದೆ.<br><br>ಸಂಸ್ಥೆಯಿಂದ ದಿ.22.02.2024 ರಂದು ಯಾದಗಿರಿಯ ಟ್ರ್ಯಾಪ್ ಪ್ರಕರಣದ ಪ್ರಸ್ತುತ ಸ್ಥಿತಿಯನ್ನು ಕೋರಿ ವ್ಯವಸ್ಥಾಪಕ ನಿರ್ದೇಶಕರು, ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಪತ್ರ ಬರೆಯಲಾಗಿದೆ.<br><br>ಡಾ.ಬಿ.ಆರ್.ಅಂಬ್ಡೇಕರ್ ಅಭಿವೃದ್ಧಿ ನಿಗಮವು ತನ್ನ ಆದೇಶ ದಿ.29.11.2024 ರಂದು ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಡಾ.ಬಾಬಾಸಾಹೇಬ್ ಲಗಮಪ್ಪ ಜಿನಾರ್ಲ್ಕರ್ ಅವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸುವ ಮೂಲಕ ಇಲಾಖಾ ವಿಚಾರಣೆ ಆದೇಶವನ್ನು ಹೊರಡಿಸಿದೆ. |
| 09 | ಸತೀಶ್ ಕುಮಾರ್ ಎಸ್. ಇಂಗಾಳೆ ಸಹಾಯಕ ವ್ಯವಸ್ಥಾಪಕರು-ಪಿಪಿ | ಗುಲ್ಬರ್ಗದ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ ಡಿಪೋದಲ್ಲಿರುವ ಹಮಾಲಿಗಳಿಂದ ಪರವಾನಗಿ ಬದಲಾವಣೆಗಾಗಿ ಹಣ ಕೇಳುವ ಮತ್ತು ಪಡೆಯುವ ಅಭ್ಯಾಸವನ್ನು ಅಧಿಕಾರಿ ಹೊಂದಿದ್ದಾರೆ ಎಂದು ಶ್ರೀ.ಸಂಜಯ್ ಅವರು ನೀಡಿದ ದೂರಿನ ಆಧಾರದ ಮೇಲೆ, ಕರ್ನಾಟಕ ಲೋಕಾಯುಕ್ತ ಕಲಬುರ್ಗಿ ಅವರು | | ಈ ವಿಷಯ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದಲ್ಲಿ ಬಾಕಿ ಇರುತ್ತದೆ. |

| | | | | |
|---|---|---|---|---|
| | | ದಿ.10.05.2016 ರಂದು ಪತ್ರ ಬರೆದು, ಸದರಿ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಶಿಫಾರಸು ಮಾಡಿದ್ದಾರೆ.<br>ಮೇಲಿನ ವರದಿಯ ಆಧಾರದ ಮೇಲೆ, ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ ದಿ.07.08.2018 ರ ಪತ್ರದಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯನ್ನು ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದೆ.<br>ಕ.ರಾ.ಹ.ಸಂ.ಯು ದಿ.18.08.2018 ರ ಪತ್ರದಲ್ಲಿ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ ಗೆ ಪತ್ರ ಬರೆದು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಯ ನಿಯೋಜನೆ ನಿಯಮಗಳು ಮತ್ತು ಸೇವಾ ನಿಯಮಗಳ ಪ್ರಕಾರ, ನಿಯೋಜನೆ ಸೇವೆ ಪಡೆದ ಸಂಸ್ಥೆಯೇ ಶಿಸ್ತುಕ್ರಮ ಜರುಗಿಸಬೇಕು ಎಂದು ತಿಳಿಸಲಾಯಿತು.<br><br>ಈ ನಿಲುವನ್ನು ದಿ.26.09.2018 ರ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಪತ್ರದಲ್ಲಿ ಮತ್ತೊಮ್ಮೆ ಪುನರುಚ್ಚರಿಸಲಾಗಿದೆ. | | |
| 10 | ಆರ್.ಕೆ. ಮಹಾದೇಸ್ವಾಮಿ<br>ಸಹಾಯಕ ವ್ಯವಸ್ಥಾಪಕರು<br><br>[ದಿ.31.05.2022 ರಂದು ಸಂಸ್ಥೆಯ ಸೇವೆಯಿಂದ ನಿವೃತ್ತರಾಗಿದ್ದಾರೆ] | ಶಿವಮೊಗ್ಗದ ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮಧಲ್ಲಿ ನಿಯೋಜನೆಯಲ್ಲಿದ್ದಾಗ ಐಎಸ್‌ಬಿ ಯೋಜನೆಯಡಿ ಕಾರು ಸಾಲಕ್ಕೆ ಸಬ್ಸಿಡಿ ಮಂಜೂರು ಮಾಡಲು ಶ್ರೀ ವಿಜಯ ನಾಯಕ್ ಅವರಿಂದ ಲಂಚ ಪಡೆಯುತ್ತಿದ್ದಾಗ ಭ್ರಷ್ಟಾಚಾರ ನಿಗ್ರಹ ದಳ [ಎಸಿಬಿ] ಕ್ಕೆ ಸಿಕ್ಕಿಬಿದ್ದು ಬಂಧಿಸಲಾಯಿತು.<br>ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ವ್ಯವಸ್ಥಾಪಕ ನಿರ್ದೇಶಕರು & ಶಿಸ್ತು ಪ್ರಾಧಿಕಾರ ಇವರ ದಿನಾಂಕ 28.03.2017 ರ ಆದೇಶದ ಪ್ರಕಾರ ಸದರಿ ಅಧಿಕಾರಿಯನ್ನು | | ಇದೇ ವಿಷಯದ ಬಗ್ಗೆ ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಸಿಬ್ಬಂದಿ ನಿಯಂತ್ರಣದ ನಿಯಮ 15(1) ರ ಅಡಿಯಲ್ಲಿ ದಿ.03.08.2019 ರ ಪತ್ರದಲ್ಲಿ ಅನುಮತಿ ನೀಡಲಾಗಿದೆ.<br><br>ಮುಂದುವರೆದು, ದಿ.21.06.2022 ಮತ್ತು ದಿ.13.12.2023 ರ ಪತ್ರಗಳಲ್ಲಿ ಸದರಿ ಅಧಿಕಾರಿಗೆ ನಿವೃತ್ತಿ ಸೌಲಭ್ಯಗಳನ್ನು ವಿತರಿಸಲು |

| | | | | |
|---|---|---|---|---|
| | | ಅಮಾನತುಗೊಳಿಸಿ, ಶಿವಮೊಗ್ಗದಿಂದ ಹಾಸನಕ್ಕೆ ಹೊಣೆಗಾರಿಕೆ ಬದಲಾವಣೆಯೊಂದಿಗೆ ಅಧಿಕಾರಿಯನ್ನು ಅಮಾನತ್ತುಗೊಳಿಸಿದೆ<br><br>ದಿ.04.06.2018 ರ ಪತ್ರದ ಮೂಲಕ ಬೆಂಗಳೂರಿನ ಭ್ರಷ್ಟಾಚಾರ ನಿಗ್ರಹ ದಳದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಪ್ರಾಸಿಕ್ಯೂಷನ್ ಅನುಮತಿ ನೀಡಲಾಗಿದೆ. | | ಎ.ಸಿ.ಬಿಯ ಅಭಿಪ್ರಾಯವನ್ನು ಕೋರಲಾಗಿದೆ. |
| **11** | **ಹೆಚ್.ಎನ್. ಮಂಜುನಾಥ ಉಪ ವ್ಯವಸ್ಥಾಪಕರು (ಹ ಮತ್ತು ಲೆ)** | ಶ್ರೀ.ಕೆ.ಆರ್.ಜಗದೀಶಯ್ಯ, ಬಿನ್ ರಾಜಣ್ಣ ದೂರಿನಲ್ಲಿ ಕುಣಿಗಲ್ ಪಟ್ಟಣ ಪುರಸಭೆ ಮುಖ್ಯಾಧಿಕಾರಿಯಾಗಿದ್ದ ಅವಧಿಯಲ್ಲಿ ನಡೆದಿರುವ ಅಕ್ರಮಗಳು. ಕುಣಿಗಲ್ ಪಾರ್ಕ್ ಅಭಿವೃದ್ಧಿಯಲ್ಲಿ ಅವ್ಯವಹಾರ ನಡೆಸಿರುವ ಬಗ್ಗೆ ಆರೋಪಿಸಿ ದೂರು ಅರ್ಜಿ ಸಲ್ಲಿಸಿರುತ್ತಾರೆ<br>ನಗಾರಾಭಿವೃದ್ಧಿ ಇಲಾಖೆಯು ತನ್ನ ಪತ್ರ ದಿ.14.05.2019 ರಲ್ಲಿ ಲೋಕಾಯುಕ್ತ ವರದಿಯನ್ನು ಲಗತ್ತಿಸಿ, ಸದರಿಯವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಒಪ್ಪಿಗೆಯನ್ನು ಕೋರಿತ್ತು.<br><br>ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ.ಯು ದಿ.11.06.2019 ರಂದು ತನ್ನ ಒಪ್ಪಿಗೆಯನ್ನು ನಿಯಮ 15(1) ರ ಅಡಿಯಲ್ಲಿ ನೀಡಿತು. | | ನಗರಾಭಿವೃದ್ಧಿ ಇಲಾಖೆಯು ತನ್ನ ಆದೇಶ ದಿ.20.09.2019 ರಲ್ಲಿ ಸದರಿ ಪ್ರಕರಣವನ್ನು ಲೋಕಾಯುಕ್ತಕ್ಕೆ ವಿಚಾರಣೆ ನಡೆಸುವ ಸಲುವಾಗಿ ವಹಿಸಿಕೊಟ್ಟಿರುತ್ತದೆ.. |
| **12** | **ಪಿ. ಗುರುದತ್ತ ಹಿರಿಯ ವ್ಯವಸ್ಥಾಪಕರು (ತಾ) ನೀರಾವರಿ ವಿಭಾಗ, ನಿಯೋಜನೆ ಮೇರೆಗೆ [ದಿ.30.06.2025 ರಂದು ಸಂಸ್ಥೆಯ ಸೇವೆಯಿಂದ** | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಿಯೋಜನೆಗೊಂಡಿದ್ದಾಗ ಬೆಂಗಳೂರು ನಗರದಲ್ಲಿ ವೃಷಭಾವತಿ ಒಳಚರಂಡಿ ಸಂಸ್ಕರಣಾ ಘಟಕದ ಅನುಷ್ಠಾನದಲ್ಲಿ ನಡೆದ ಅಕ್ರಮಗಳು. | | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದಿ. 09.10.2020 ರಂದು ಕಾರಣ ಕೇಳುವ ನೋಟೀಸನ್ನು ನೀಡಿದೆ.<br><br>ಸಂಸ್ಥೆಯು ದಿ.03.04.2025 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪತ್ರ ಬರೆದು ಅಧಿಕಾರಿಯ ವಿರುದ್ಧದ ಶಿಸ್ತು ಕ್ರಮದ |

| | | | | |
|---|---|---|---|---|
| | ನಿವೃತ್ತರಾಗಿದ್ದಾರೆ] | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದಿ.28.08.2019 ರಂದು ಪತ್ರ ಬರೆದು, ವರದಿಯನ್ನು ಲಗತ್ತಿಸಿ, ಸದರಿ ವರದಿಯ ಮೇಲೆ ಅಧಿಕಾರಿಯಿಂದ 7 ದಿನಗಳೊಳಗೆ ಸಮಜಾಯಿಷಿಯನ್ನು ಪಡೆದು ಬಿ.ಬಿಎಂಪಿಗೆ ಸಲ್ಲಿಸಲು ತಿಳಿಸಿತು.<br><br>ಈ ಅಧಿಕಾರಿ ಜಲಸಂಪನ್ಮೂಲ ಇಲಾಖೆಗೆ ನಿಯೋಜನೆಯಲ್ಲಿದ್ದಾರೆ, ಬಿಬಿಎಂಪಿಯಲ್ಲಿ ಅವರ ನಿಯೋಜನೆಯ ಅವಧಿಯಲ್ಲಿ ನಡೆದ ಅಕ್ರಮಗಳಿಗೆ ಸಂಬಂಧಿಸಿದ ವಿಷಯವಾಗಿರುವುದರಿಂದ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಸಿಬ್ಬಂದಿ ನಿಯಮಗಳ ಪ್ರಕಾರ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಶಿಸ್ತು ಪ್ರಾಧಿಕಾರವಾಗಿದೆ. ಅದರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಳುಹಿಸಿದ ವರದಿಯನ್ನು ದಿ.20.09.2019 ರಂದು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಿಂತಿರುಗಿಸಿರುತ್ತದೆ.. | | ಇತ್ತೀಚಿನ ಬೆಳವಣಿಗೆಗಳನ್ನು ಒದಗಿಸಲು ಕೋರಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಚಾರಣಾ ಅಧಿಕಾರಿಯು, ವಿಚಾರಣಾ ನೋಟೀಸನ್ನು ಸಂಸ್ಥೆಗೆ ಕಳುಹಿಸಿ, ಅಧಿಕಾರಿಗೆ ನೀಡಿ, ಸ್ವೀಕೃತಿಯನ್ನು ಕಳುಹಿಸುವಂತೆ ತಿಳಿಸಿತ್ತು. ಸದರಿ ನೋಟೀಸನ್ನು ದಿ.13.02.2025 ರಂದು ಅಧಿಕಾರಿಗೆ ನೋಟೀಸನ್ನು ನೀಡಲಾಗಿದೆ. |
| 13 | ಹೆಚ್.ಎನ್. ಮಂಜುನಾಥ ಉಪ ವ್ಯವಸ್ಥಾಪಕರು (ಹ ಮತ್ತು ಲೆ) ಪಿಪಿ | ಪುರಸಭೆ, ಕಡೂರು ಇಲ್ಲಿ ನಿಯೋಜನೆ ಮೇಲೆ ಕೆಲಸ ನಿರ್ವಹಿಸುವಾಗ ನಡೆದ ಅಕ್ರಮಗಳು. ರಸ್ತೆ ಕಾಮಗಾರಿಗಳನ್ನು ನಿರ್ವಹಿಸುವಲ್ಲಿ ಟಿಎಂಸಿಯ ಒಪ್ಪಂದವು ಟೆಂಡರ್ ಷರತ್ತುಗಳನ್ನು ಪಾಲಿಸಿಲ್ಲ ಎಂದು ಆರೋಪಿಸಿ ಶ್ರೀ.ರಮೇಶ್ ಕೆ.ಸಿ. ಲೋಕಾಯುಕ್ತಕ್ಕೆ ದೂರು ಸಲ್ಲಿಸಿದರು. | | ನಗರಾಭಿವೃದ್ಧಿ ಇಲಾಖೆಯ ದಿ.27.01.2021 ರ ಆದೇಶದಲ್ಲಿ KCSR ನಿಯಮ 14(A) ಅಡಿಯಲ್ಲಿ ಈ ವಿಷಯವನ್ನು ಉಪ-ಲೋಕಯುಕ್ತಕ್ಕೆ ವಿಚಾರಣೆ ನಡೆಸಲು ವಹಿಸಿದೆ.<br><br>ದಿ.27.02.2024 ರಂದು ಕರ್ನಾಟಕ ಲೋಕಾಯುಕ್ತರಿಗೆ ಪತ್ರ ಬರೆದು, ಶಿಸ್ತು ಕ್ರಮದ ಪ್ರಸ್ತುತ ಸ್ಥಿತಿಗತಿಯನ್ನು ಕೋರಲಾಗಿದೆ. ಪ್ರತಿಯನ್ನು |

| | | | | |
|---|---|---|---|---|
| | | ನಿರ್ಮಿಸಲ್ಪಟ್ಟಿರುವ ರಸ್ತೆಯಲ್ಲಿ ಗುಂಡಿಗಳು ನಿರ್ಮಾಣವಾಗಿವ, ರಸ್ತೆ ಕಾಮಗಾರಿಯ ಗುಣಮಟ್ಟವನ್ನು ಕಾಯ್ದುಕೊಳ್ಳಲು ಮುಖ್ಯ ಅಧಿಕಾರಿಯಾಗಿರುವ ಶ್ರೀ.ಎಚ್.ಎನ್.ಮಂಜುನಾಥ್ ರವರು ಕ್ರಮ ಕೈಗೊಳ್ಳಲು ವಿಫಲರಾಗಿದ್ದಾರೆ ಮತ್ತು ಸಂಬಂಧಪಟ್ಟ ಗುತ್ತಿಗೆದಾರರ ವಿರುದ್ಧವೂ ಕ್ರಮ ಕೈಗೊಳ್ಳಲು ವಿಫಲರಾಗಿದ್ದಾರೆ ಎಂದು ಆರೋಪಿಸಲಾಗಿರುತ್ತದೆ.<br><br>ನಗರಾಭಿವೃದ್ಧಿ ಇಲಾಖೆಯು ದಿ.18.05.2020 ರಂದು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಸೆಕ್ಷನ್ 12[3] ರ ಅಡಿಯಲ್ಲಿ ಲೋಕಾಯುಕ್ತದಿಂದ ಬಂದ ವರದಿಯನ್ನು ಲಗತ್ತಿಸಿ ಕಳುಹಿಸಿರುವ ಪತ್ರವನ್ನು ಸ್ವೀಕರಿಸಲಾಗಿದೆ.<br><br>ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ದಿ.04.07.2020 ರ ಪತ್ರದ ಮೂಲಕ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಸಿಬ್ಬಂದಿ ನಿಯಮಗಳು 1965 ರ ನಿಯಮ 15 ರ ಅಡಿಯಲ್ಲಿ ಉದ್ಯೋಗಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ನಗರಾಭಿವೃದ್ಧಿ ಇಲಾಖೆಗೆ ಅನುಮತಿ ನೀಡಲಾಗಿದೆ.. | | ಪೌರಸಮಿತಿ ನಿರ್ದೇಶಕರಿಗೆ ಮತ್ತು ಶಿಸ್ತು ಕ್ರಮದ ಪ್ರಸ್ತುತ ಸ್ಥಿತಿಗತಿಯನ್ನು ಕೋರಿ ಸಲ್ಲಿಸಲಾಗಿದೆ. |

| | | | | |
|---|---|---|---|---|
| 14 | ವಸಂತಕುಮಾರ್ ಡಿ. ಅವರಾದಿ, | ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಹಾವೇರಿಯಲ್ಲಿ ಜಿಲ್ಲಾ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾಗ ದಿ.11.09.2020 ರಂದು ನಿಗಮದ ಭೂಮಾಲೀಕತ್ವ ಯೋಜನೆಯಡಿ ಭೂಮಿ ಮಂಜೂರಾತಿಗಾಗಿ ಶ್ರೀ.ಸಿದ್ದಪ್ಪ ಲಮಾಣಿ ಅವರಿಂದ ರೂ.25,000/- ಲಂಚ ಪಡೆಯುತ್ತಿದ್ದಾಗ ಹಾವೇರಿಯ ಎಸಿಬಿ ಅಧಿಕಾರಿಗಳಿಗೆ ಸಿಕ್ಕಿಬಿದ್ದರು.<br><br>ತದ ನಂತರ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, 23.10.2020 ರಂದು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಅಧಿಕಾರಿಯ ಸೇವೆಯನ್ನು ಹಿಂತಿರುಗಿಸುವ ಬಗ್ಗೆ ಪತ್ರವನ್ನು ಬರೆದಿದ್ದಾರೆ.<br><br>ಸಮಾಜ ಕಲ್ಯಾಣ ಇಲಾಖೆಯು ತನ್ನ 08.01.2021 ರ ಆದೇಶದಲ್ಲಿ ಸದರಿ ಅಧಿಕಾರಯನ್ನು ಅಮಾನತ್ತುಗೊಳಿಸಿರುತ್ತದೆ.<br>ಸಮಾಜ ಕಲ್ಯಾಣ ಇಲಾಖೆಯು ಅಧಿಕಾರಿಯನ್ನು ಕರ್ನಾಟಕ ಮಹರ್ಷಿ ವಾಲ್ಮೀಕಿ SC/ST ಅಭಿವೃದ್ಧಿ ನಿಗಮದ ಕಲಬುರ್ಗಿ ಶಾಖೆಗೆ ದಿನಾಂಕ 07.05.2021 ರ ಆದೇಶದ ಮೂಲಕ ನಿಯೋಜಿಸಿದೆ.<br>ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವು ಅಧಿಕಾರಿಯ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಅನುಮತಿ ಕೋರಿ ದಿ.07.01.2021 ರಂದು KSFC ಗೆ ಪತ್ರ ಬರೆದಿದೆ. | | ಲೋಕಾಯುಕ್ತ ಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸದರಿ ಅಧಿಕಾರಿಯು ಗೌರವಾನ್ವಿತ ಕರ್ನಾಟಕದ ಹೈಕೋರ್ಟ್‌ನಲ್ಲಿ WP ಸಂಖ್ಯೆ 7591/2021[S-RES] ಮೊಕದ್ದಮೆ ದಾಖಲಿಸಿ, ದಿ.08.01.2021 ರಂದು ಸಮಾಜ ಕಲ್ಯಾಣ ಇಲಾಖೆಯು ಹೊರಡಿಸಿದ ಅಮಾನತು ಆದೇಶವನ್ನು ರದ್ದುಗೊಳಿಸುವಂತೆ ನ್ಯಾಯಾಲಯವನ್ನು ಕೋರಿದ್ದಾರೆ. ಪ್ರಕರಣವು ಬಾಕಿ ಇರುತ್ತದೆ.<br><br>ಮುಂದುವರೆದು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಲೋಕಾಯುಕ್ತ ಇಲಾಖೆಗೆ ದಿ.31.07.2024 ರ ಪತ್ರದಲ್ಲಿ ಪ್ರಾಸಿಕ್ಯೂಷನ್ ನಡೆಸಲು ಅನುಮತಿ ನೀಡಲಾಗಿದೆ. |

| | | | | |
|---|---|---|---|---|
| | | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ನಿಯಮಾವಳಿಗಳನ್ವಯ ನಿಯಮ 15(1) ರ ಪ್ರಕಾರ ಈ ವಿಷಯದ ಬಗ್ಗೆ ಉದ್ಯೋಗಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸಂಸ್ಥೆಯ ದಿ.17.02.2021 ರ ಪತ್ರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಅನುಮತಿ ನೀಡಲಾಗಿದೆ. | | |
| 15 | **ಹೆಚ್.ಎನ್. ಮಂಜುನಾಥ ಉಪ ವ್ಯವಸ್ಥಾಪಕರು (ಹ ಮತ್ತು ಲೆ) ಪಿಪಿ** | ಕಡೂರು ಪುರಸಭೆ ಕಚೇರಿಯಲ್ಲಿ ಮುಖ್ಯ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ, ದಿ.29.10.21 ರಂದು ಚಿಕ್ಕಮಗಳೂರಿನ ಎಸಿಬಿ ಅಧಿಕಾರಿಗಳು ದೂರುದಾರರ ಪತ್ನಿಯ ಒಡೆತನದ ಆಸ್ತಿ ಸಂಖ್ಯೆ 70/4 ಕ್ಕೆ ಖಾತಾ ನೀಡಲು ಶ್ರೀ.ರಘು ಸೋದರ ಗೋವಿಂದಪ್ಪ ಅವರಿಂದ ರೂ.10,000/- ಲಂಚ ಪಡೆಯುತ್ತಿದ್ದಾಗ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದರು.<br>ಪುರಸಭೆ ಆಡಳಿತ ನಿರ್ದೇಶಕರು ದಿ.25.11.2021 ರಂದು ಸಂಸ್ಥೆಗೆ ಬರೆದ ಪತ್ರದಲ್ಲಿ ಸದರಿ ಅಧಿಕಾರಿಯವರನ್ನು ಬಂಧಿಸಿದ ದಿನಾಂಕದಿಂದ ಪೂರ್ವಾನ್ವಯವಾಗಿ ಅಮಾನತುಗೊಳಿಸಲಾಗಿದೆ ಮತ್ತು ಅಧಿಕಾರಿಯವರನ್ನು ಮಾತೃ ಇಲಾಖೆಗೆ ವಾಪಸ್ ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ.<br>ಬೆಂಗಳೂರು ನಗರದ ಭ್ರಷ್ಟಾಚಾರ ನಿಗ್ರಹ ದಳದ ದಿ.29.11.2021 ರ ಪತ್ರದಲ್ಲಿ ನೌಕರನ ವಿರುದ್ಧ ದಾಖಲಾಗಿರುವ ಪ್ರಕರಣದ ಬಗ್ಗೆ ಮತ್ತು ಘಟನೆಯ ವಿವರಗಳನ್ನು ತಿಳಿಸಿ, ನೌಕರನನ್ನು ಅಮಾನತುಗೊಳಿಸಲು ಶಿಫಾರಸು ಮಾಡಿದ ಪುರಸಭೆ ಆಡಳಿತ ನಿರ್ದೇಶಕರು ಈಗಾಗಲೇ ನೌಕರನನ್ನು ಅಮಾನತುಗೊಳಿಸಿ ಎಸಿಬಿಗೆ ಮಾಹಿತಿ | | ದಿ.08.12.21 ರಂದು ಪುರಸಭೆ ಆಡಳಿತ ನಿರ್ದೇಶಕರಿಗೆ ಬರೆದ ಪತ್ರದಲ್ಲಿ, ಸಿಬ್ಬಂದಿ ನಿಯಮಾವಳಿ ನಿಯಮ 15(1) ರ ಕಡೆಗೆ ಗಮನ ಸೆಳೆಯಲಾಗಿದೆ, ಇದರಲ್ಲಿ ನಿಯೋಜಿತ ಉದ್ಯೋಗಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಮೊದಲು ಹಾಗೂ ಉದ್ಯೋಗಿಯನ್ನು ಅಮಾನತ್ತಿನಲ್ಲಿಡುವ ಮೊದಲು ಮಾತೃ ಇಲಾಖೆಯ ಅನುಮತಿಯನ್ನು ಪಡೆಯಬೇಕಾಗಿರುತ್ತದೆ ಎಂದು ತಿಳಿಸಲಾಯಿತು. ಅಲ್ಲದೆ ಅಮಾನತ್ತಿನಟ್ಟಿರುವ ಅಧಿಕಾರಿಯನ್ನು ಮಾತೃ ಇಲಾಖೆಗೆ ವಾಪಸ್ ಕಳುಸಹಿಸಲು ಬರುವುದಿಲ್ಲ ಎಂದು ತಿಳಿಸಲಾಗಿದೆ.<br><br>ಸಂಸ್ಥೆಯ ದಿ.12.07.22 ರ ಪತ್ರದಲ್ಲಿ ಅಧಿಕಾರಿಯನ್ನು ಅಮಾನತುಗೊಳಿಸಿರುವುದರಿಂದ ಅವರಿಗೆ ಜೀವನಾಧಾರ ಭತ್ಯೆಯನ್ನು ಪುರಸಭೆ ಆಡಳಿತ ಪಾವತಿಸಬೇಕು ಎಂದು ತಿಳಿಸಲಾಗಿದೆ.<br>ಮುಂದುವರೆದು, ಸಂಸ್ಥೆಯು ದಿ .27.02.2024 ರಂದು ಕರ್ನಾಟಕ ಲೋಕಾಯುಕ್ತರಿಗೆ ಪತ್ರ ಬರೆದು, ಶಿಸ್ತು ಕ್ರಮದ ಬಗ್ಗೆ ಪ್ರಸ್ತುತ ಹಂತದ ಬಗ್ಗೆ ಮಾಹಿತಿಯನ್ನು ಕೋರಲಾಗಿದೆ. ನಿರ್ದೇಶಕರು |

| | | | | |
|---|---|---|---|---|
| | | ನೀಡಿರುವುದರಿಂದ, ನಮ್ಮ ಕಡೆಯಿಂದ ತಕ್ಷಣದ ಕ್ರಮ ಕೈಗೊಳ್ಳಲಾಗಿದೆ. | | ಪೌರಸಮಿತಿ ಇವರಿಗೂ ಶಿಸ್ತು ಕ್ರಮದ ಪ್ರಸ್ತುತ ಸ್ಥಿತಿಗತಿಯ ಮಾಹಿತಿ ಕೋರಲಾಗಿದೆ. |
| **16** | **ಹೆಚ್.ಎನ್. ಮಂಜುನಾಥ ಉಪ ವ್ಯವಸ್ಥಾಪಕರು (ಹ ಮತ್ತು ಲೆ) ಪಿಪಿ** | ಕಡೂರು ಪುರಸಭೆ ಕಚೇರಿಯಲ್ಲಿ ಮುಖ್ಯ ಅಧಿಕಾರಿಯಾಗಿ ನಿಯೋಜನೆ ಮೇಲೆ ಕೆಲಸ ಮಾಡುತ್ತಿದ್ದಾಗ, ಶ್ರೀ.ಶಶಿಧರ್ ಅವರು ಕಡೂರು ಪುರಸಭೆ ಕಚೇರಿಗೆ ರೂ.67,871/- ಠೇವಣಿ ಪಾವತಿಸಿದ ನಂತರವೂ ಅಂಗಡಿಗಳನ್ನು ಇ-ಹರಾಜಿನ ಮೂಲಕ ತೆಗೆದುಕೊಂಡರೂ ಸಹಾ ಅಂಗಡಿಗಳನ್ನು ಶ್ರೀ.ಶಶಿಧರ್ ಅವರಿಗೆ ಅಂಗಡಿಗಳನ್ನು ಹಸ್ತಾಂತರಿಸಲು ವಿಫಲರಾಗಿದ್ದಾರೆಂದು ಆರೋಪಿಸಲಾಗಿದೆ. | | ಶ್ರೀ.ಮಂಜುನಾಥ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಅನುಮತಿ ನೀಡುವಂತೆ ನಗರಸಭೆ ಆಡಳಿತ ನಿರ್ದೇಶಕರು ದಿ.28.01.2022 ರಂದು ಪತ್ರ ಬರೆದಿದ್ದು, ಸದರಿ ಪತ್ರಕ್ಕೆ ಯಾವುದೇ ಲಗತ್ತುಗಳಿಲ್ಲವಾದ್ದರಿಂದ ಶ್ರೀ.ಮಂಜುನಾಥ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಚಿಕ್ಕಮಗಳೂರು ಜಿಲ್ಲಾಧಿಕಾರಿಯವರ ಶಿಫಾರಸುಗಳನ್ನು ಕಳುಹಿಸುವಂತೆ ನಗರಸಭೆ ಆಡಳಿತ ನಿರ್ದೇಶಕರಿಗೆ ದಿ.22.02.2022 ರ ಪತ್ರದಲ್ಲಿ ಕೋರಲಾಗಿದೆ. |
| **17** | **ವಸಂತಕುಮಾರ್ ಡಿ. ಅವರಾದಿ,** | ಕರ್ನಾಟಕ ಮಹರ್ಷಿ ವಾಲ್ಮೀಕಿ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ ನಿಯಮಿತ, ಕಲಬುರ್ಗಿ ಇಲ್ಲಿ ನಿಯೋಜನೆ ಮೇಲೆ ಜಿಲ್ಲಾ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾಗ 2021-22ನೇ ಹಣಕಾಸು ವರ್ಷದಲ್ಲಿ ಆರ್ಥಿಕವಾಗಿ ದುರ್ಬಲ ವರ್ಗದ ಜನರಿಗೆ ಕೈಗೆಟುಕುವ ಮನೆಗಳನ್ನು ಒದಗಿಸುವ ಯೋಜನೆಯಲ್ಲಿ ಅರ್ಹ ವ್ಯಕ್ತಿಗಳ ಆಯ್ಕೆಯಲ್ಲಿ ಲೋಪ ಎಸಗಿದ್ದಾರೆ ಎಂಬ ಆರೋಪವಿರುತ್ತದೆ. ಕರ್ನಾಟಕ ಮಹರ್ಷಿ ವಾಲ್ಮೀಕಿ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮದ ಅಧಿಕಾರಿಯ ವಿರುದ್ಧ ಶಿಸ್ತುಕ್ರಮ/ಮೊಕದ್ದಮೆ ಹೂಡಲು ಅನುಮತಿ ಕೋರಿ ಕರಾಹಸಂ ಗೆ ದಿ.04.11.2022 ರಂದು ಪತ್ರ ಬರೆದಿದೆ. ಕ.ರಾ.ಹ.ಸಂಸ್ಥೆಯ ದಿ.21.11.22 ರ ಪತ್ರದಲ್ಲಿ ಸಿಬ್ಬಂದಿ ನಿಯಮಾವಳಿ, ನಿಯಮ 15(1) ರ ಪ್ರಕಾರ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಈ ವಿಷಯದ ಬಗ್ಗೆ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಅನುಮತಿ ನೀಡಲಾಗಿದೆ.. | | ಸಂಸ್ಥೆಯ ದಿ.22.02.2024 ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ ಇವರಿಗೆ ಸದರಿ ಪ್ರಕರಣದಲ್ಲಿನ ಶಿಸ್ತು ಕ್ರಮದ ಪ್ರಸ್ತುತ ಸ್ಥಿತಿಯನ್ನು ಕೋರಲಾಗಿದೆ. |

| | | | | |
|---|---|---|---|---|
| 18 | **ವಸಂತಕುಮಾರ್ ಡಿ. ಅವರಾದಿ,** | ಕರ್ನಾಟಕ ಮಹರ್ಷಿ ವಾಲ್ಮೀಕಿ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ ನಿಯಮಿತ, ಕಲಬುರ್ಗಿ ಇಲ್ಲಿ ನಿಯೋಜನೆ ಮೇಲೆ ಜಿಲ್ಲಾ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾಗ, ಅವರು ಭೂ ಒಡೇತನ ಯೋಜನೆ ಅನುಷ್ಠಾನದ ಸಮಯದಲ್ಲಿ ಲೋಪಗಳನ್ನು ಮಾಡಿದ್ದಾರೆ. ಕರ್ನಾಟಕ ಮಹರ್ಷಿ ವಾಲ್ಮೀಕಿ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ ನಿಯಮಿತವು ದಿ.05.11.22 ರಂದು ಕಾರಣ ಕೇಳುವ ಪತ್ರ ಹೊರಡಿಸಿ, ದಿ.17.10.2022 ರಂದು ಪರಿಶೀಲನಾ ವರದಿಯನ್ನು ಒಳಗೊಂಡಂತೆ ವಿವರಣೆಯನ್ನು ಕೋರಿದೆ. | | ದಿ.22.02.2024 ರಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ ಅವರಿಗೆ ಪತ್ರ ಬರೆದು,. ಶಿಸ್ತು ಕ್ರಮದ ಪ್ರಸ್ತುತ ಸ್ಥಿತಿಯನ್ನು ಕೋರಲಾಗಿದೆ |
| 19 | **ರಾಮಕೃಷ್ಣ ಎಂ. ಮಾಜಿ ಹಿರಿಯ ವ್ಯವಸ್ಥಾಪಕರು (ಇ ಅಂಡ್ ಪಿ)-ಪಿಪಿ [ದಿ.30.04.2022 ರಂದು ಸಂಸ್ಥೆಯ ಸೇವೆಯಿಂದ ನಿವೃತ್ತರಾಗಿದ್ದಾರೆ]** | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಜಂಟಿ ನಿರ್ದೇಶಕರಾಗಿ ಕೆಲಸ ಮಾಡುವಾಗ, ಬೊಮ್ಮನಹಳ್ಳಿ ವಲಯವು ಪರಿವರ್ತಿತ ಭೂಮಿಗೆ ಖಾತಾಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ/ನಿಯಮಾವಳಿಗಳನ್ನು ಉಲ್ಲಂಘಿಸುವ ಮೂಲಕ ಲೋಪಗಳನ್ನು ಎಸಗಿರುತ್ತಾರೆ | | ದಿ.10.11.2022 ರ ಸರ್ಕಾರಿ ಆದೇಶದ ಪ್ರಕಾರ ಸರ್ಕಾರವು ಇಲಾಖಾ ವಿಚಾರಣೆ ನಡೆಸಲು ಆದೇಶಿಸಿದೆ ಮತ್ತು ಪ್ರಕರಣವನ್ನು ಲೋಕಾಯುಕ್ತಕ್ಕೆ ಹಸ್ತಾಂತರಿಸಿದೆ. |
| 20 | **ಹೆಚ್.ಎನ್. ಮಂಜುನಾಥ ಉಪ ವ್ಯವಸ್ಥಾಪಕರು (ಹ ಮತ್ತು ಲೆ) ಪಿಪಿ-2** | ಕಡೂರು ಪುರಸಭೆ ಕಚೇರಿಯಲ್ಲಿ ನಿಯೋಜನೆ ಮೇಲೆ ಮುಖ್ಯ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ, ಚಿಕ್ಕಮಗಳೂರು ಜಿಲ್ಲೆಯ ಕಡೂರಿನಲ್ಲಿ ಎಮ್ಮೆದೊಡ್ಡಿ ಅರಣ್ಯ ಪ್ರದೇಶವೆಂದು ಸಂರಕ್ಷಿಸಲಾಗಿರುವ ಸೈ.ನಂ.70 ರಲ್ಲಿನ ಭೂಮಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುತ್ತಾರೆ. ಶ್ರೀ.ದಿವಾಕರ್ ಸಿ.ಸಿ. ಅವರು ಕೆಪಿಎಲ್‌ಸಿಎಲ್ [ಕರ್ನಾಟಕ ಪಬ್ಲಿಕ್ ಲ್ಯಾಂಡ್ ಕಾರ್ಪೊರೇಷನ್ ಲಿಮಿಟೆಡ್] ನಲ್ಲಿ ದೂರು | | ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಅರಣ್ಯ ಇಲಾಖೆ ರವರ ದಿ.05.09.2024 ರ ಪತ್ರದಲ್ಲಿ ಶ್ರೀ.ಎಚ್.ಎನ್.ಮಂಜುನಾಥ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಅನುಮತಿ ನೀಡುವಂತೆ ಕೋರಿರುತ್ತಾರೆ.<br>ಮುಂದುವರೆದು, ಅರಣ್ಯ ಇಲಾಖೆಯು ದಿ.25.10.2023 ರಂದು ಕ್ರಿಮಿನಲ್ ಸಂಖ್ಯೆ.06/2023-24 ರನ್ವಯ ಕೇಸು ದಾಖಲಿಸಿರುತ್ತದೆ. |

| | | | | |
|---|---|---|---|---|
| | | ದಾಖಲಿಸಿದ್ದಾರೆ. | | ಸಂಸ್ಥೆಯ ಶಿಸ್ತು ಕ್ರಮ ಪ್ರಾಧಿಕಾರಿಯವರು ದಿ.03.10.2024 ರಂದು ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿರುತ್ತಾರೆ |

## ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧಿಕಾರಿಗಳು/ನೌಕರರ ವಿರುದ್ಧ ಲೋಕಯುಕ್ತ /ಎಸಿಬಿ ಪ್ರಕರಣಗಳ ವಿವರ

| ಕ್ರ.ಸ. | ಅಧಿಕಾರಿಗಳ ಹೆಸರು, ಹುದ್ದೆ ಮತ್ತು ಸ್ಥಳ | ಪ್ರಕರಣದ ಸಂಗತಿಗಳು | ಟ್ರ್ಯಾಪ್ ಪ್ರಕರಣ ಸಂಖ್ಯೆ ಮತ್ತು ದಿನಾಂಕ | ಅಮಾನತು ದಿನಾಂಕ | ಮರು-ಸ್ಥಾಪನೆಯ ದಿನಾಂಕ | ವಿಚಾರಣೆಗೆ ಮಂಡಳಿಯ ಅನುಮೋದನೆ ದಿನಾಂಕ | ಪ್ರಾಸಿಕ್ಯೂಷನ್ ದಿನಾಂಕಕ್ಕೆ ಅನುಮತಿ | ಷರಾ |
|---|---|---|---|---|---|---|---|---|
| 01 | ಶ್ರೀ ಎನ್.ಜಿ. ಚಂದ್ರೇಗೌಡ ಮಾಜಿ ಸ.ಪ್ರ.ವ್ಯ[ಕಾನೂನು] [28.10.2016 ರಂದು ನಿವೃತ್ತರಾದರು] | ಶ್ರೀ ಎನ್.ಜಿ. ಚಂದ್ರೇಗೌಡರು ಮಂಡ್ಯದ ಶಾಖಾ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಅವರ ನಿವಾಸ ಮತ್ತು ಕಚೇರಿಯ ಮೇಲೆ ಮಂಡ್ಯ ಲೋಕಾಯುಕ್ತ ಎಸ್ಪಿ ದಾಳಿ ನಡೆಸಿದರು. ಅಕ್ರಮ ಆಸ್ತಿ ಪ್ರಕರಣವನ್ನು ಅಪರಾಧ ಸಂಖ್ಯೆ.01/2015 ರಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆ 1988 ರ ಸೆಕ್ಷನ್ 13(1) (ಇ) ಜೊತೆಗೆ ಸೆಕ್ಷನ್ 13(2) ರಲ್ಲಿ ದಾಖಲಿಸಲಾಗಿದೆ, | Crime No. 01/2015 [ಮಂಡ್ಯ] | 25.05.15 | 28.10.16 | - | - | ಅಧಿಕಾರಿಯು 28.10.2016 ರಂದು ಸಂಸ್ಥೆಯ ಸೇವೆಯಿಂದ ನಿವೃತ್ತರಾಗಿರುತ್ತಾರೆ. ಸಂಸ್ಥೆಯು ಯಾವುದೇ ಪ್ರಾಸಿಕ್ಯೂಷನ್ ಅನುಮತಿಯನ್ನು ನೀಡಿಲ್ಲ. ಇದಲ್ಲದೆ, ಲೋಕಾಯುಕ್ತ ಕಚೇರಿಯಿಂದ ಇಲ್ಲಿಯವರೆಗೆ ಸಂಸ್ಥೆಗೆ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ. |
| 02 | ಶ್ರೀ ಎಲ್.ಬಿ. ನಿಲೋಗಲ್ ಕಾರ್ಯ ನಿರ್ವಾಹಕ ನಿರ್ದೇಶಕರು(ನಿವೃತ್ತ) [31.07.2019 ರಂದು ನಿವೃತ್ತರಾದರು] | ಶ್ರೀ ಎಲ್.ಬಿ. ನಿಲೋಗಲ್ ವಿರುದ್ಧ ಲೋಕಾಯುಕ್ತ ಮತ್ತು ಅಕ್ರಮ ಆಸ್ತಿ ಪ್ರಕರಣದಡಿಯಲ್ಲಿ ದಾಳಿ ನಡೆಸಲಾಗಿದೆ. ಭ್ರಷ್ಟಾಚಾರ ತಡೆ ಕಾಯ್ದೆ 1988 ರ ಸೆಕ್ಷನ್ 13(1) (ಇ) ಜೊತೆಗೆ ಸೆಕ್ಷನ್ 13(2) ಅಡಿಯಲ್ಲಿ ಅಪರಾಧ ಸಂಖ್ಯೆ.01/2015 ರಲ್ಲಿ ಪ್ರಕರಣ ದಾಖಲಾಗಿದೆ. | Crime No. 01/2015 [ಕೊಪ್ಪಳ] | -- | -- | 01.07.15 | 08.12.16 | 08.12.2016 ರಂದು ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಲಾಗಿದೆ. |

| | | | | | | | | |
|---|---|---|---|---|---|---|---|---|
| 03 | ರಮೇಶ್ ಎನ್ ಹಿರಿಯ ವ್ಯವಸ್ಥಾಪಕರು (ಕಾನೂನು) (ನಿವೃತ್ತ) [31.05.2024 ರಂದು ನಿವೃತ್ತರಾದರು] | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಧಾರವಾಡ ಶಾಖಾ ಕಚೇರಿಯಲ್ಲಿ ಸೀನಿಯರ್ ಮ್ಯಾನೇಜರ್ [ಕಾನೂನು] ಆಗಿ ಕೆಲಸ ಮಾಡುತ್ತಿದ್ದಾಗ, 29.05.2024 ರಂದು ವಾಣಿಜ್ಯ ಉದ್ದೇಶಕ್ಕಾಗಿ ವಾಹನ ಖರೀದಿಸಲು ಸಾಲ ಮಂಜೂರು ಮಾಡಲು ಕಾನೂನು ಅಭಿಪ್ರಾಯ ನೀಡಲು ಶ್ರೀ. ಪ್ರವೀಣ್ ಮಾಳಗಿ, ಹಿರೇಕೆರೂರು, ಹಾವೇರಿ ಅವರಿಂದ ರೂ.8,000/- ಲಂಚ ಪಡೆಯುತ್ತಿದ್ದಾಗ ಧಾರವಾಡದ ಕರ್ನಾಟಕ ಲೋಕಾಯುಕ್ತರಿಂದ ರೆಡ್ ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿರುತ್ತಾರೆ. | Crime No.4/2024 29.05.24 | 29.05.24 | | | - | ಅಧಿಕಾರಿಯನ್ನು 29.05.2024 ರಂದು ಅಮಾನತುಗೊಳಿಸಲಾಗಿದೆ. ಶ್ರೀ.ರಮೇಶ್ ಎನ್ ಅವರಿಗೆ ಟರ್ಮಿನಲ್ ಪ್ರಯೋಜನಗಳನ್ನು ವಿತರಿಸಲು NOC ಕೋರಲು 22.10.24 ರಂದು ಲೋಕಾಯುಕ್ತಕ್ಕೆ ಪತ್ರ ಕಳುಹಿಸಲಾಗಿದೆ. ಪೊಲೀಸ್ ಮಹಾನಿರ್ದೇಶಕರು, ಲೋಕಾಯುಕ್ತ, ಬೆಂಗಳೂರು, 17.02.2025 ರಂದು ಬರೆದ ಪತ್ರದ ಮೂಲಕ ಮಾಜಿ ಹಿರಿಯ ವ್ಯವಸ್ಥಾಪಕ [ಕಾನೂನು] ಶ್ರೀ.ರಮೇಶ್ ಎನ್ ಅವರನ್ನು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಲು ಅನುಮತಿ ನೀಡುವಂತೆ ಸಂಸ್ಥೆಯನ್ನು ಕೋರಿದ್ದು, ಅನುಮೋದನೆ ನೀಡಲಾಗಿದೆ. |

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧಿಕಾರಿಗಳು/ನೌಕರರ ವಿರುದ್ಧ ಲೋಕಯುಕ್ತ /ಎಸಿಬಿ ಪ್ರಕರಣಗಳ ವಿವರ

| ಕ್ರ.ಸ. | ಅಧಿಕಾರಿಗಳ ಹೆಸರು ಮತ್ತು ಹುದ್ದೆ ಮತ್ತು ಸ್ಥಳ | ಪ್ರಕರಣದ ಸಂಗತಿಗಳು | ಟ್ರ್ಯಾಪ್ ಪ್ರಕರಣ ಸಂಖ್ಯೆ ಮತ್ತು ದಿನಾಂಕ | ಅಮಾನತು ದಿನಾಂಕ | ಮರು-ಸ್ಥಾಪನೆಯ ದಿನಾಂಕ | ವಿಚಾರಣೆಗೆ ಮಂಡಳಿಯ ಅನುಮೋದನೆ ದಿನಾಂಕ | ಪ್ರಾಸಿಕ್ಯೂಷನ್ ದಿನಾಂಕಕ್ಕೆ ಅನುಮತಿ | ಷರಾ |
|---|---|---|---|---|---|---|---|---|
| 1 | ಆರ್ ಕೆ ಮಹದೇವಸ್ವಾಮಿ ನಿವೃತ್ತ ಸಹಾಯಕ ವ್ಯವಸ್ಥಾಪಕರು<br><br>[31.05.2022 ರಂದು ನಿವೃತ್ತರಾದರು] | ಶಿವಮೊಗ್ಗದ ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ದಲ್ಲಿ ನಿಯೋಜನೆಯಲ್ಲಿದ್ದಾಗ ಐಎಸ್‌ಬಿ ಯೋಜನೆಯಡಿ ಕಾರು ಸಾಲಕ್ಕೆ ಸಬ್ಸಿಡಿ ಮಂಜೂರು ಮಾಡಲು ಶ್ರೀ ವಿಜಯ ನಾಯಕ್ ಅವರಿಂದ ಲಂಚ ಪಡೆಯುತ್ತಿದ್ದಾಗ ಭ್ರಷ್ಟಾಚಾರ ನಿಗ್ರಹ ದಳ [ಎಸಿಬಿ] ಯಿಂದ ಸಿಕ್ಕಿಬಿದ್ದು ಬಂಧಿಸಲಾಗಿದೆ. | Crime No.4/2017 | 28.03.17 | -- | -- | 04.06.18 | ,ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ವೇಳೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮರವರ ಆದೇಶದ ಪ್ರಕಾರ ದಿನಾಂಕ 28.03.17 ರಂದು ಅಧಿಕಾರಿಯನ್ನು ಅಮಾನತುಗೊಳಿಸಲಾಯಿತು. ಹಾಗೂ ಬೆಂಗಳೂರಿನ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಲಾಗಿದೆ.<br><br>ಇದೇ ವಿಷಯದ ಬಗ್ಗೆ 03.08.2019 ರಂದು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಶಿಸ್ತು ಕ್ರಮ ಕೈಗೊಳ್ಳಲು |

| | | | | | | | | |
|---|---|---|---|---|---|---|---|---|
| | | | | | | | | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಸಿಬ್ಬಂದಿ ನಿಯಂತ್ರಣದ ನಿಯಮ 15(1) ರ ಅಡಿಯಲ್ಲಿ ಅನುಮತಿ ನೀಡಲಾಗಿದೆ. ನಿವೃತ್ತ ಸವಲತ್ತುಗಳನ್ನು ವಿತರಿಸಲು NOC ಕೋರಿ ACB ಗೆ 21.06.22 ಮತ್ತು 13.12.2023 ರಲ್ಲಿ ಪತ್ರಗಳನ್ನು ಬರೆಯಲಾಗಿದೆ. |
| 2 | ಬಸವರಾಜೇ ಗೌಡ, ವ್ಯವಸ್ಥಾಪಕರು[ತಾ] [30.11.2020 ರಂದು ನಿವೃತ್ತರಾದರು] | ಅಧಿಕಾರಿಯ ನಿವಾಸ ಮತ್ತು ಕಚೇರಿಯ ಮೇಲೆ ನಡೆಸಿದ ದಾಳಿಯ ಆಧಾರದ ಮೇಲೆ ಅವರು ಶೇ. 109.98 ರಷ್ಟು ಅಕ್ರಮ ಆಸ್ತಿಯನ್ನು ಹೊಂದಿದ ಕಾರಣ ಅಧಿಕಾರಿಯನ್ನು ಅಮಾನತುಗೊಳಿಸಲು ಎಸಿಬಿ ಹೆಚ್ಚುವರಿ ಪೊಲೀಸ್ ಆಯುಕ್ತರು ಸೂಚಿಸಿರುತ್ತಾರೆ | Crime No.4/2018 | - | - | - | - | ಅಧಿಕಾರಿಯ ವಿರುದ್ಧ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲು/ಅವರನ್ನು ಅಮಾನತುಗೊಳಿಸುವಂತೆ ಕೋರಿ ಎಸಿಬಿ ಹೆಚ್ಚುವರಿ ಪೊಲೀಸ್ ಆಯುಕ್ತರು 13.11.18 ರಂದು ಸ್ವೀಕರಿಸಿದ ಪತ್ರವನ್ನು ಅವರು ನಿಯೋಜನೆಯಲ್ಲಿದ್ದ ಕಾರಣ 18.12.18 ರಂದು ಕಾವೇರಿ ನಿರಾವರಿ ನಿಗಮ ನಿಯಮಿತ ಅವರಿಗೆ ಕಳುಹಿಸಲಾಗಿದೆ. |

| | | | | | | | | |
|---|---|---|---|---|---|---|---|---|
| 3 | ವಸಂತಕುಮಾರ್ ಡಿ ಅವರಾದಿ ಉಪ ವ್ಯವಸ್ಥಾಪಕರು(ಹ&ಲೆ) | ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಜಿಲ್ಲಾ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾಗ,ನಿಗಮದ ಮಹಿಳಾ ಅಭಿವೃದ್ಧಿ ಯೋಜನೆಯಡಿ ಸಾಲ ಮಂಜೂರು ಮಾಡಲು ಶ್ರೀ.ಲಕ್ಷ್ಮಣ್ ರವರಿಂದ ರೂ.20,000/- ಲಂಚ ಪಡೆಯುತ್ತಿದ್ದಾಗ ದಿನಾಂಕ 29.12.18 ರಂದು ಯಾದಗಿರಿಯ ಎಸಿಬಿ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದರು. | Crime no.08/2018 | 08.01.19 ಡಾ:ಬಿ. ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ | - | - | **03.07.21** | ಡಾ.ಬಿ.ಆರ್.ಅಂಬ್ಡೇಕರ್ ಅಭಿವೃದ್ಧಿ ನಿಗಮದಿಂದ ಉದ್ಯೋಗಿಯನ್ನು ಅಮಾನತುಗೊಳಿಸಿದೆ. ಉದ್ಯೋಗಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸಂಸ್ಥೆಯಿಂದ ಅನುಮತಿ ನೀಡಿದೆ. ಹಾಗೂ ಪ್ರಾಸಿಕ್ಯೂಷನ್ ಗೂ ಸಹ ಅನುಮತಿಯನ್ನು ನೀಡಲಾಗಿದೆ. ಡಾ.ಬಿ.ಆರ್.ಅಂಬ್ಡೇಕರ್ ಅಭಿವೃದ್ಧಿ ನಿಗಮದಲ್ಲಿ, 29.11.24 ರಂದು ನೀಡಿದ ಆದೇಶದ ಪ್ರಕಾರ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಡಾ.ಬಾಬಾಸಾಹೇಬ್ ಲಗಮಪ್ಪ ಜಿನಾರ್ಲ್ಕರ್ ಅವರನ್ನು ವಿಚಾರಣಾಧಿಕಾರಿಯಾಗಿ ನೇಮಿಸುವ ಮೂಲಕ ಇಲಾಖಾ ವಿಚಾರಣೆಗೆ ಸೂಚಿಸಲಾಗಿದೆ. |
| 4 | ವಸಂತಕುಮಾರ್ ಡಿ ಅವರಾದಿ ಉಪ ವ್ಯವಸ್ಥಾಪಕರು(ಹ& ಲೆ) | ಹಾವೇರಿಯ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಜಿಲ್ಲಾ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾಗ ದಿನಾಂಕ 11.09.2020 ರಂದು ನಿಗಮದ | Crime Noi.04/2020 11.09.20 | 08.01.2021 ಸಮಾಜ ಕಲ್ಯಾಣ ಇಲಾಖೆಯಿಂದ, | 07.05.2021 ಸಮಾಜ ಕಲ್ಯಾಣ ಇಲಾಖೆಯಿಂದ, | - | - | ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, 23.10.2020 ರಂದು ಕೆಎಸ್‌ಎಫ್‌ಸಿಗೆ ಉದ್ಯೋಗಿಯನ್ನು ವಾಪಸ್ ಕಳುಹಿಸುವ ಪತ್ರ ಬರೆದಿರುತ್ತಾರೆ. |

| | | | | | | | | |
|---|---|---|---|---|---|---|---|---|
| | | ಭೂಮಾಲೀಕತ್ವ ಯೋಜನೆಯಡಿ ಭೂಮಿ ಮಂಜೂರಾತಿಗಾಗಿ ಶ್ರೀ.ಸಿದ್ದಪ್ಪ ಲಮಾಣಿ ಅವರಿಂದ ರೂ.25,000/- ಲಂಚ ಪಡೆಯುತ್ತಿದ್ದಾಗ ಎಸಿಬಿ ಹಾವೇರಿಯ ಅಧಿಕಾರಿಗಳಿಗೆ ಸಿಕ್ಕಿಬಿದ್ದರು. | | | | | | ಸಮಾಜ ಕಲ್ಯಾಣ ಇಲಾಖೆಯು 08.01.21 ರಂದು ಉದ್ಯೋಗಿಯನ್ನು ಅಮಾನತುಗೊಳಿಸಿದೆ.<br><br>ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, 07.01.21 ರಂದು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಅಧಿಕಾರಿಯ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಅನುಮತಿ ಕೋರಿ ಪತ್ರ ಬರೆದಿರುತ್ತಾರೆ. ಕೆಎಸ್ಎಫ್‌ಸಿ, 17.02.21 ರಂದು ಸಿಬ್ಬಂದಿ ನಿಯಂತ್ರಣದ ನಿಯಮ 15(1) ರ ಪ್ರಕಾರ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಗೆ ಉದ್ಯೋಗಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಅನುಮತಿ ನೀಡಿದೆ.<br><br>ಸಮಾಜ ಕಲ್ಯಾಣ ಇಲಾಖೆಯು, ಅವರನ್ನು ಕರ್ನಾಟಕ ಮಹರ್ಷಿ ವಾಲ್ಮೀಕಿ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ ನಿಯಮಿತನ ಕಲಬುರ್ಗಿ ಶಾಖೆಗೆ 07.05.21 ರಂದು ಹೊರಡಿಸಿದ ಆದೇಶದ ಮೂಲಕ ನಿಯೋಜಿಸಿದೆ. |

| | | | | | | | | |
|---|---|---|---|---|---|---|---|---|
| | | | | | | | | ಅಧಿಕಾರಿಯು ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ವಿರುದ್ಧ ಕರ್ನಾಟಕದ ಹೈಕೋರ್ಟ್‌ನಲ್ಲಿ WP ಸಂಖ್ಯೆ 7591/2021[S-RES] ಸಲ್ಲಿಸಿ 08.01.21 ರಂದು ಸಮಾಜ ಕಲ್ಯಾಣ ಇಲಾಖೆ ಹೊರಡಿಸಿದ ಅಮಾನತು ಆದೇಶವನ್ನು ರದ್ದುಗೊಳಿಸುವಂತೆ ನ್ಯಾಯಾಲಯವನ್ನು ಕೋರಿರುತ್ತಾರೆ.. ಪ್ರಕರಣ ಬಾಕಿ ಇದೆ<br><br>ಕರ್ನಾಟಕ ಲೋಕಾಯುಕ್ತಕ್ಕೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ 31.07.2024 ರಂದು ಪ್ರಾಸಿಕ್ಯೂಷನ್ ಅನುಮತಿಯನ್ನು ನೀಡಿತು. |
| 5 | ಗಂಗಾಧರಸ್ವಾಮಿ ಟಿ.ಆರ್ ಸ.ಪ್ರ.ವ್ಯ 31.08.2021 ರಂದು ನಿವೃತ್ತರಾದರು | ಅಧಿಕಾರಿಯ ವಿರುದ್ಧ ತನಿಖೆ ನಡೆಸಲು ಎಸಿಬಿ, ಎಡಿಜಿಪಿ, ಬೆಂಗಳೂರು ಇವರು ಪತ್ರದ ಮೂಲಕ ದಿನಾಂಕ 5-12-2020ರಂದು ಅನುಮತಿ ಕೋರಿದ್ದರು. | - | - | - | - | - | 20.03.2021 ರಂದು ನಡೆದ ಸಂಸ್ಥೆಯ ಸಭೆಯಲ್ಲಿ ನಿಗಮದ ಮಂಡಳಿಯು ಅಧಿಕಾರಿಯ ವಿರುದ್ಧ ತನಿಖೆ ನಡೆಸಲು ಅನುಮೋದನೆ ನೀಡಿತು ಮತ್ತು ಅದನ್ನು27.01.2021 ರಂದು ಎಸಿಬಿ ಗೆ ತಿಳಿಸಲಾಗಿದೆ. |

| | | | | | | | | |
|---|---|---|---|---|---|---|---|---|
| | | ಘನತ್ಯಾಜ್ಯ ಸಂಸ್ಕರಣಾ ಘಟಕದ ವೈಫಲ್ಯಕ್ಕೆ ಕಾರಣಗಳನ್ನು ತನಿಖೆ ಮಾಡಲು ಮತ್ತು ಘಟಕದ ವೈಫಲ್ಯಕ್ಕೆ ಕಾರಣರಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು M/s SGRRL Company ಯ ನೌಕರರು ಮತ್ತು ಅಧಿಕಾರಿಗಳ ವಿರುದ್ಧ ವಿವರವಾದ ತನಿಖೆ ನಡೆಸಲು ಸರ್ಕಾರವು 18.12.2020 ರಂದು ಎಸಿಬಿಗೆ ಈ ವಿಷಯವನ್ನು ವಹಿಸಿಕೊಟ್ಟಿದೆ. ಅದರಂತೆ, 20.08.2020 ರಂದು PC ಕಾಯ್ದೆ, 1988 ರ ಸೆಕ್ಷನ್ 13(1)(ಸಿ) ಮತ್ತು 13(2) ಮತ್ತು IPC ಸೆಕ್ಷನ್ 406, 409 ಮತ್ತು 34 ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಪ್ರಾಥಮಿಕ ತನಿಖೆ ನಡೆಸಿದ ನಂತರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆಯ | | | | | | |

| | | | | | | | | |
|---|---|---|---|---|---|---|---|---|
| | | ಮೇಲೆ ಕೆಲಸ ಮಾಡುತ್ತಿದ್ದ ಅಧಿಕಾರಿಯ ವಿರುದ್ಧ ತನಿಖೆ ನಡೆಸಲು ಅನುಮತಿ ನೀಡುವಂತೆ ಸಂಸ್ಥೆಯನ್ನು ಕೋರಿರುತ್ತಾರೆ. | | | | | | |
| 6 | ಎಚ್.ಎನ್.ಮಂಜುನಾಥ | ಕಡೂರು ಪುರಸಭೆ ಕಚೇರಿಯಲ್ಲಿ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾಗ ದಿನಾಂಕ 29.10.21 ರಂದು ದೂರುದಾರರ ಆಸ್ತಿಗೆ ಖಾತ ನೀಡಲು ರೂ.10,000/- ಲಂಚ ಪಡೆಯುತ್ತಿದ್ದಾಗ ಚಿಕ್ಕಮಗಳೂರಿನ ಎಸಿಬಿ ಅಧಿಕಾರಿಗಳಿಗೆ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದರು. | Crime No. 03/2021 29.10.21 | 29.10.21 | | | 10.01.22 | ಪುರಸಭೆ ಆಡಳಿತ ನಿರ್ದೇಶಕರು ಸದರಿ ಉದ್ಯೋಗಿಯನ್ನು ಅಮಾನತುಗೊಳಿಸಿ ಮಾತ್ರ ಇಲಾಖೆಗೆ ವಾಪಸ್ ಕಳುಹಿಸಿರುತ್ತಾರೆ.<br><br>ಎಸಿಬಿ, ಬೆಂಗಳೂರು ಇವರು 29.11.21 ರಂದು ಪತ್ರ ಬರೆದು, ಘಟನೆಯ ವಿವರಗಳೊಂದಿಗೆ ನೌಕರನ ವಿರುದ್ಧ ದಾಖಲಾಗಿರುವ ಟ್ರ್ಯಾಪ್ ಪ್ರಕರಣವನ್ನು ತಿಳಿಸಿ ಉದ್ಯೋಗಿಯನ್ನು ಅಮಾನತುಗೊಳಿಸಲು ಶಿಫಾರಸು ಮಾಡಿದ್ದಾರೆ. ಪುರಸಭೆ ಆಡಳಿತ ನಿರ್ದೇಶಕರು ಈಗಾಗಲೇ ನೌಕರನನ್ನು ಅಮಾನತುಗೊಳಿಸಿದ್ದಾರೆ ಮತ್ತು ಎಸಿಬಿ ಗೆ ಮಾಹಿತಿ ನೀಡಲಾಗಿದೆ.<br><br>ಸಂಸ್ಥೆಯು ದಿನಾಂಕ 08.12.21 ರಂದು |

| | | | | | | | | | |
|---|---|---|---|---|---|---|---|---|---|
| | | | | | | | | | ಪುರಸಭೆ ಆಡಳಿತ ನಿರ್ದೇಶಕರಿಗೆ ಪತ್ರ ಮುಖೇನ ನಿಯೋಜಿತ ಉದ್ಯೋಗಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಮೊದಲು ಪೋಷಕ ಇಲಾಖೆಯ ಅನುಮತಿಯನ್ನು ಪಡೆಯಬೇಕಾಗುತ್ತದೆ ಎಂಬ ಸಿಬ್ಬಂದಿ ನಿಯಂತ್ರಣದ ನಿಯಮ 15(1) ರನ್ನು ತಿಳಿಸಿದ್ದು ಅಮಾನತುಗೊಳಿಸಲಾದ ಉದ್ಯೋಗಿಯನ್ನು ವಾಪಸು ಕಳುಹಿಸಲು ಯಾವುದೇ ಅವಕಾಶವಿಲ್ಲ ಎಂದು ತಿಳಿಸಲಾಗಿದೆ.<br><br>10-1-2022 ರಂದು ಬರೆದ ಪತ್ರದ ಮೂಲಕ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲಾಗಿದೆ.<br><br>12-7-2022 ರಂದು ಪುರಸಭೆ ಆಡಳಿತಕ್ಕೆ ಬರೆದ ಪತ್ರದಲ್ಲಿ, ನೌಕರರನ್ನು ಅಮಾನತುಗೊಳಿಸಿರುವುದರಿಂದ ಅವರಿಗೆ ಜೀವನಾಧಾರ ಭತ್ಯೆಯನ್ನು ಪುರಸಭೆ ಆಡಳಿತ ಪಾವತಿಸಬೇಕು ಎಂದು ತಿಳಿಸಲಾಗಿದೆ.<br><br>27-2-2024 ರಂದು ಕರ್ನಾಟಕ ಲೋಕಾಯುಕ್ತರಿಗೆ ಸಿಆರ್. |

| | | | | | | | | |
|---|---|---|---|---|---|---|---|---|
| | | | | | | | | ನಂ.03/2021ರ ಪ್ರಸ್ತುತ ಸ್ಥಿತಿಯನ್ನು ತಿಳಿಸಲು ಕೋರಲಾಗಿದೆ. |

**ಸಂಖ್ಯೆ: ಆಇ 358 ಆನಿ 2025**